# ನಗರಪಾಲಿಕೆಗಳಲ್ಲಿ ಮಹಿಳಾ ಸದಸ್ಯರು

## ಆಡಳಿತದಲ್ಲಿ ಪರಿಣಾಮಕಾರಿ ಪಾತ್ರವಹಿಸಲು ಮಾರ್ಗೋಪಾಯಗಳು, ಕರ್ನಾಟಕ, ದಕ್ಷಿಣ ಭಾರತ



URC URBAN RESEARCH CENTRE
ನಗರ ಸಂಶೋಧನಾ ಕೇಂದ್ರ






FRIEDRICH
EBERT
STIFTUNG

# ನಗರಪಾಲಿಕೆಗಳಲ್ಲಿ ಮಹಿಳಾ ಸದಸ್ಯರು

ಅಧ್ಯಯನದ ಒಂದು ವರದಿ

ಆಡಳಿತದಲ್ಲಿ ಪರಿಣಾಮಕಾರಿ ಪಾತ್ರವಹಿಸಲು ಮಾರ್ಗೋಪಾಯಗಳು

ಕರ್ನಾಟಕ, ದಕ್ಷಿಣ ಭಾರತ

(ಏಪ್ರಿಲ್–ಸಪ್ಟೆಂಬರ್ 2005)

ಸಹಾಯದೊಂದಿಗೆ

**ಫ್ರೆಡರಿಕ್ ಈಬರ್ಟ್ ಸ್ಟಿಫ್ಟಂಗ್**

ನವ ದೆಹಲಿ

ನಗರ ಸಂಶೋಧನಾ ಕೇಂದ್ರ (ರಿ)

ಇ–1, ಮೈತ್ರಿ ಅಪಾರ್ಟಮೆಂಟ್ಸ್,

6ನೇ ಮುಖ್ಯ ರಸ್ತೆ, 15ನೇ ಅಡ್ಡ ರಸ್ತೆ,

ಮಲ್ಲೇಶ್ವರಂ, ಬೆಂಗಳೂರು–560003

ಕರ್ನಾಟಕ. ಭಾರತ

ದೂರವಾಣಿ: 0091–80–23364509, 09488–49353

ಫ್ಯಾಕ್ಸ್: 0091–80–22921033

ಈಮೆಲ್: urcblr@gmail.com

ಮಾರ್ಚ್ 2007

© ಫ್ರೆಡರಿಕ್–ಈಬರ್ಟ್–ಸ್ಟಿಫ್ಟಂಗ್, ಮಾರ್ಚ್ 2007

ಪ್ರಕಾಶಕರು :

**ಫ್ರೆಡರಿಕ್–ಈಬರ್ಟ್–ಸ್ಟಿಫ್ಟಂಗ್,** (ಭಾರತ ಕಛೇರಿ)

ಕೆ–70ಬಿ, ಹೌಜ್ ಕಾಸ್ ಎನ್‌ಕ್ಲೇವ್,

ನವದೆಹಲಿ.

ಈಮೆಲ್: fes@fesindia.org

ವಿನ್ಯಾಸ ಮತ್ತು ಮುದ್ರಣ :

**ಅಕ್ಷರೋಗ್ರಾಫಿಕ್ಸ್**

ನಂ. 643, 12ನೇ ಅಡ್ಡರಸ್ತೆ,

ಎಂ.ಸಿ. ಲೇಔಟ್, ವಿಜಯನಗರ,

ಬೆಂಗಳೂರು – 560 040.

ಐ.ಎಸ್.ಬಿ.ಎನ್.

81–7440–0640–8

# ಅಧ್ಯಯನ ತಂಡ

ಸಂಶೋಧನೆ ಸಂಯೋಜಕ

**ಗುರುರಾಜ ಬುಧ್ಯ**

ಸಂಶೋಧನೆ ಸಹಾಯಕ

**ರಾಘವೇಂದ್ರ.ಎಸ್.ಆರ್.**

## ಸಹಯೋಗೀ ಸಂಘಟನೆಗಳು

**ಮಕ್ಕಳ ಕಲ್ಯಾಣಕ್ಕಾಗಿ ಕೊಡಗು ಜಿಲ್ಲಾ ಪರಿಷತ್ತು**
ಸಂಪರ್ಕ ವ್ಯಕ್ತಿ : ಸೀತಾಲಕ್ಷ್ಮಿ ರಾಮಚಂದ್ರ, ಕಾರ್ಯದರ್ಶಿ
ಕ್ಷೇತ್ರ ಸಹಾಯಕಿ : ಸಿ.ಎನ್.ಚಂದ್ರಮ್ಮ

**ಡೀಡ್ಸ, ಮಂಗಳೂರು**
ಸಂಪರ್ಕ ವ್ಯಕ್ತಿ : ಮರ್ಲಿನ್ ಮಾರ್ಟಿಸ್, ನಿರ್ದೇಶಕಿ
ಕ್ಷೇತ್ರ ಸಹಾಯಕಿ : ಪ್ರಮೀಳಾ

**ಬಳಕೆದಾರರ ವೇದಿಕೆ, ಉಡುಪಿ**
ಸಂಪರ್ಕ ವ್ಯಕ್ತಿ : ದಾಮೋದರ ಐತಾಳ, ಸಂಚಾಲಕರು
ಕ್ಷೇತ್ರ ಸಹಾಯಕಿ : ಯಶೋದಾ ಶೆಟ್ಟಿ

**ಜಿಲ್ಲಾ ಕೊಳಚೆ ನಿವಾಸಿಗಳ ಸಂಘ, ತುಮಕೂರು**
ಸಂಪರ್ಕ ವ್ಯಕ್ತಿ : ನರಸಿಂಹ ಮೂರ್ತಿ, ಅಧ್ಯಕ್ಷರು
ಕ್ಷೇತ್ರ ಸಹಾಯ : ಟಿ.ಕೆ.ದಯಾನಂದ

**ಪರಿವರ್ತನ. ಹುಬ್ಬಳ್ಳಿ**
ಸಂಪರ್ಕ ವ್ಯಕ್ತಿ : ಸಿ. ಅಮರೇಶ ಹಿಪ್ಪರಗಿ, ಕಾರ್ಯದರ್ಶಿ
ಕ್ಷೇತ್ರ ಸಹಾಯ : ವಿಶ್ವನಾಥ ಹೊರಕೇರಿ

# ಕೃತಜ್ಞತೆಗಳು

ಕರ್ನಾಟಕದ ಉಡುಪಿ ಜಿಲ್ಲೆಯ ಉಡುಪಿ ನಗರಪಾಲಿಕೆಯ ಮಹಿಳಾ ಸದಸ್ಯರ ಜೊತೆಗೆ ನಮ್ಮ ಸಂಭಾಷಣೆಯ ಫಲವಾಗಿ ಹಾಗೂ ನಂತರ ನಗರಪಾಲಿಕೆಯ ಮಹಿಳಾ ಸದಸ್ಯರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ಹಾಗೂ ಅದರಿಂದ ಕಲಿತುಕೊಳ್ಳುವಂತೆ ಮಾಡಲು ನಾವು ಅವರನ್ನು ಒಟ್ಟಿಗೆ ಸೇರಿಸಲು ಮಾಡಿದ ಪ್ರಯತ್ನಗಳ ಫಲವಾಗಿ ಈ ಅಧ್ಯಯನದ ವಿಚಾರ ಹೊರಮೂಡಿತು. ನಗರಪಾಲಿಕೆಗಳ ಮಹಿಳಾ ಸದಸ್ಯರನ್ನು ಹೊರ ಜಗತ್ತಿಗೆ ಪರಿಚಯಿಸಲು 2003ರ ಜೂನ್ ತಿಂಗಳಲ್ಲಿ ಉಡುಪಿಯಲ್ಲಿ ನಡೆದ ಕಾರ್ಯಕ್ರಮ, 2004ರ ನವಂಬರಿನಲ್ಲಿ ಬೆಂಗಳೂರಿನಲ್ಲಿ ನಡೆದ ನಗರಪಾಲಿಕೆಗಳ ಮಹಿಳಾ ಸದಸ್ಯರ ರಾಜ್ಯ ಮಟ್ಟದ ಕಾರ್ಯಾಗಾರ, 2005ರ ಅಗಸ್ಟ ತಿಂಗಳು ಮೈಸೂರಿನಲ್ಲಿ ಈ ಅಧ್ಯಯನದ ಅಂಗವಾಗಿ ನಡೆಸಲಾದ ಅವರ ತರಬೇತಿ ಕಾರ್ಯಕ್ರಮ ಹಾಗೂ 2005ರ ಸಪ್ಟಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಈ ಅಧ್ಯಯನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ನಡೆದ ಸಭೆ, ಇವು ನಗರಪಾಲಿಕೆಗಳ ಮಹಿಳಾ ಸದಸ್ಯರನ್ನು ಒಂದೆಡೆ ತರಲು ನಾವು ಮಾಡಿದ ವಿಶಿಷ್ಟ ಪ್ರಯತ್ನಗಳಲ್ಲಿ ಹಲವು.

ಈ ಅಧ್ಯಯನದ ಯೋಜನೆಯನ್ನು ಸಿದ್ಧಪಡಿಸುವಾಗಿನಿಂದಲೇ ಸ್ಥಳೀಯ ಸಂಘಟನೆಗಳು, ನಗರಪಾಲಿಕೆಗಳ ಮಹಿಳಾ ಸದಸ್ಯರು, ನಗರಪಾಲಿಕೆಗಳ ಮಾಜಿ ಮಹಿಳಾ ಸದಸ್ಯರು ಹಾಗೂ ಹಿತಚಿಂತಕರನ್ನು ತೊಡಗಿಸಿಕೊಳ್ಳುವ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಈ ವಿಧಾನದ ಬಗ್ಗೆ, ಹಾಗೂ ಈ ಅಧ್ಯಯನದಲ್ಲಿ ಬಳಸಲಾಗುವ ಪ್ರಶ್ನಾವಳಿಯ ಬಗ್ಗೆ ಚರ್ಚೆ ಮಾಡಲು 2005ರ ಎಪ್ರಿಲ್ ತಿಂಗಳಲ್ಲಿ ಹಲವಾರು ಸಭೆಗಳನ್ನು ಕರೆಯಲಾಗಿತು. ಅಧ್ಯಯನ ತಂಡ ಹಲವಾರು ನಗರಗಳಿಗೆ ಭೇಟಿ ನೀಡಿ ನಗರಪಾಲಿಕೆಗಳ ಮಹಿಳಾ ಹಾಗೂ ಪುರುಷ ಸದಸ್ಯರೊಂದಿಗೆ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳ, ಸದಸ್ಯರೊಂದಿಗೆ ಫಲಪ್ರದವಾದ ಚರ್ಚೆ ನಡೆಸಿತು.

ಈ ಅಧ್ಯಯನಕ್ಕಾಗಿ ನಗರಪಾಲಿಕೆಗಳ ಮಹಿಳಾ ಹಾಗೂ ಪುರುಷ ಸದಸ್ಯರನ್ನು, ರಾಜಕೀಯ ಪಕ್ಷಗಳ ಮುಖಂಡರನ್ನು ಹಾಗೂ ನಗರಪಾಲಿಕೆಗಳ ಅಧಿಕಾರಿ ವರ್ಗಗಳನ್ನು ಭೇಟಿಯಾಗುವಲ್ಲಿ, ಪೂರ್ವ ಸಿದ್ಧತೆಗಳನ್ನು ಮಾಡಿ ಸಹಕರಿಸಿದ ಶ್ರೇಯ ನಮ್ಮ ಸಹಯೋಗೀ ಸಂಘಟನೆಗಳು ಹಾಗೂ ಅವುಗಳ ಸಿಬ್ಬಂದಿ ವರ್ಗಗಳಿಗೆ ಸಲ್ಲಬೇಕು. ಹಾಗೆಯೇ ನಮಗೆ ಸ್ಫೂರ್ತಿ ನೀಡಿ ಹಲವಾರು ಒಳನೋಟಗಳನ್ನು ಒದಗಿಸಿಕೊಟ್ಟು ಸಹಕರಿಸಿದ ಪ್ರೊ: ಭಾರ್ಗವ, ಪ್ರೊ: ಹನುಮಂತ, ಶ್ರೀ ಎಲ್.ಸಿ.ಜೈನ್ ಹಾಗೂ ಶ್ರೀ ಬಾಪು ಹೆದ್ದೂರಶೆಟ್ಟಿಯವರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ಈ ಅಧ್ಯಯನದ ಇಡೀ ಪ್ರಕ್ರಿಯೆಯಲ್ಲಿ, ಸಹಯೋಗೀ ಸಂಘಟನೆಗಳೊಂದಿಗೆ ಚರ್ಚಿಸುವಲ್ಲಿ, ವಿವಿಧ ಚಟುವಟಿಕೆಗಳನ್ನು, ಕಾರ್ಯಾಗಾರಗಳನ್ನು ಸಂಘಟಿಸುವುದರಲ್ಲಿ, ಯೋಜನೆಗಳನ್ನು ರೂಪಿಸುವಲ್ಲಿ, ಶ್ರೀ ರಾಘವೇಂದ್ರ ಅವರು ಸಹಾಯ ಮಾಡಿದ್ದಾರೆ. ಅವರಿಲ್ಲದೇ ಈ ಅಧ್ಯಯನ ಸಾಧ್ಯವೇ ಆಗುತ್ತಿರಲಿಲ್ಲ. ನಗರ ಸಂಶೋಧನಾ ಕೇಂದ್ರದ ಸಿಬ್ಬಂದಿ ಸದಸ್ಯರು ಹಾಗೂ ವ್ಯವಸ್ಥಾಪನಾ ಪರಿಷತ್ತಿನ ಸದಸ್ಯರೂ ಕೂಡ ಬಹಳ ಸಹಕಾರಿಯಾಗಿದ್ದರು.

ನಮ್ಮ ಕಾಳಜಿಗಳನ್ನು ಹಂಚಿಕೊಂಡಿದ್ದಕ್ಕಾಗಿ ಹಾಗೂ ರಾಜಕೀಯದ ಪ್ರಕ್ರಿಯೆಯಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ನಾವು ಕೈಗೊಂಡ ಕ್ರಮಗಳನ್ನು ಪ್ರೋತ್ಸಾಹಿಸಿದ್ದಕ್ಕಾಗಿ ಹೊಸ ದೆಹಲಿಯ ಫ್ರೆಡರಿಕ್ ಈಬರ್ಟ ಸ್ಟಿಫ್ಟಂಗ್ ಸಂಸ್ಥೆಯವರಿಗೂ ನಾವು ಆಭಾರಿಯಾಗಿದ್ದೇವೆ.

ಗುರುರಾಜ ಬುಧ್ಯ
ಕಾರ್ಯದರ್ಶಿ – ನಗರ ಸಂಶೋಧನಾ ಕೇಂದ್ರ

# ಮುನ್ನುಡಿ

ನಗರಾಡಳಿತ ಇಂದು, ನಾಗರಿಕರು, ಸ್ಥಳೀಯ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರ ಸರಕಾರಗಳು ಹಾಗೂ ಈ ಪರಿಧಿಯ ಒಳಗೆ, ಯಾವುದೇ ರಾಜಕೀಯ ಸಂರಚನೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಸ್ವಾಡಳಿತ ಸಂಘಟನೆಗಳು ಮೊದಲಾದ ಹಲವಾರು ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಒಳಗೊಂಡಿದೆ. ಈ ಸಂಸ್ಥೆಗಳ ಚುನಾಯಿತ ಮಹಿಳೆಯರು ಹಾಗೂ ಪುರುಷರು ಜನರಿಗೆ ಹಾಗೂ ಅವರ ಸಮಸ್ಯೆಗಳಿಗೆ ಅತ್ಯಂತ ಹತ್ತಿರ ಇರುವುದರಿಂದ, ಆಡಳಿತದಲ್ಲಿ ಸುಧಾರಣೆಯಾಗಬಹುದು ಎಂಬ ಆಶಾಕಿರಣವನ್ನು ಚುನಾಯಿತ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ, ಆಡಳಿತಾತ್ಮಕ ಹಾಗೂ ಕ್ರಿಯಾತ್ಮಕ ಅಧಿಕಾರಗಳ ವಿಕೇಂದ್ರೀಕರಣದ ಮೇಲೆ ಒತ್ತು ನೀಡುವ ಸಂವಿಧಾನದ 74ನೆಯ ತಿದ್ದುಪಡಿಯು ಮೂಡಿಸಿತು. ಆದರೆ ದುರಾದೃಷ್ಟವಶಾತ್, 1994ರಲ್ಲಿ ಸಂವಿಧಾನದ 74ನೆಯ ತಿದ್ದುಪಡಿ ಜಾರಿಗೆ ಬಂದಾಗಿನಿಂದ ಇದುವರೆಗೆ ಆದ ವ್ಯಾವಹಾರಿಕ ಅನುಭವ ಈ ಆಶೋತ್ತರಗಳನ್ನು ಹುಸಿಗೊಳಿಸಿದೆ. ನಗರಾಡಳಿತ ಸಂಸ್ಥೆಗಳ ಒಂದರ ಮೇಲೊಂದು ಚಾಚಿಕೊಂಡಿರುವ ಅಧಿಕಾರ ವ್ಯಾಪ್ತಿಗಳಿಂದಾಗಿ, ಸ್ವತಂತ್ರ ಅಸ್ತಿತ್ವವುಳ್ಳ ಸಂಸ್ಥೆಗಳು ಹಾಗೂ ಸರಕಾರದ ವಿವಿಧ ಇಲಾಖೆಗಳಿಂದಾಗಿ, ನಾಗರಿಕರಿಗೆ ಸೇವೆಗಳನ್ನು ಒದಗಿಸುವಲ್ಲಿ ಈ ಸಂಸ್ಥೆಗಳಿಗೆ ಸ್ಪಷ್ಟವಾದ ಲಕ್ಷ್ಮಣ ರೇಖೆಗಳು ಇಲ್ಲದಂತಾಗಿವೆ. ಅಷ್ಟೇ ಅಲ್ಲ, ಈ ಸಂಸ್ಥೆಗಳು ಒಂದರ ಮೇಲೊಂದು ಬರಿ ಅಪವಾದವನ್ನು ಹೊರಿಸುವಂತಾಗಿದೆ. ಇವುಗಳ ಜೊತೆಗೆ, ತಮ್ಮ ಸ್ವಾರ್ಥವನ್ನು ಸಾಧಿಸುವ ಗುಂಪುಗಳ ಸಂಚು ಹಾಗೂ ಬಹಳಷ್ಟು ಸಂದರ್ಭಗಳಲ್ಲಿ ನಾಗರಿಕರ ಅಮಾಯಕತನ ಹಾಗೂ ಹಲವು ಬಾರಿಯಂತೂ ಅವರ ನಿರಾಸಕ್ತಿಗಳೂ ಇದರಲ್ಲಿ ಸೇರಿಕೊಂಡಿವೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಇರುವ ಅಡೆತಡೆಗಳನ್ನು ತೊಡೆದು ಹಾಕುವಲ್ಲಿ ಹಾಗೂ ಭೂಮಿಯ ದುರ್ಬಳಕೆಯ ಸಮಸ್ಯೆಗಳ ಬಗ್ಗೆ ಮುಂಬಯಿಯಲ್ಲಿ ಕಂಡುಬಂದ ನಾಗರಿಕರ ಆಂದೋಲನಗಳು ಅಥವಾ ದೆಹಲಿಯಲ್ಲಿ ಕಂಡುಬಂದ ನ್ಯಾಯಾಂಗದ ಕ್ರಿಯಾಶೀಲತೆಗಳು ಬಹಳ ನಿಧಾನವಾಗಿ ಹಾಗೂ ಅತ್ಯಂತ ಕಡಿಮೆ ಪರಿಣಾಮಗಳೊಂದಿಗೆ ಮೂಡಿಬಂದ ಹಲವು ಪ್ರತಿಕ್ರಿಯೆಗಳು. ಇಷ್ಟು ಹೇಳಿದ ನಂತರ, ನಗರಗಳಿಗೆ ಮೂಲಸೌಲಭ್ಯಗಳನ್ನು ಒದಗಿಸುವಲ್ಲಿ ತೊಡಗಿಸಲಾಗುತ್ತಿರುವ ಬೃಹತ್ ಹಣಕಾಸಿನ ನೆರವನ್ನೂ ಗಮನದಲ್ಲಿಟ್ಟುಕೊಳ್ಳುವುದು ಆವಶ್ಯಕ. 63 ನಗರಗಳ ಆಡಳಿತವನ್ನು ಸುಧಾರಿಸುವ, ಅವುಗಳ ಮೂಲಭೂತ ಸೌಲಭ್ಯಗಳ ಬೇಡಿಕೆಯನ್ನು ಪೂರ್ತಿಗೊಳಿಸುವ ಹಾಗೂ ಅವುಗಳ ಬಡವರಿಗೆ ಮೂಲಭೂತ ಸೇವೆಗಳನ್ನು ಒದಗಿಸುವ ಭರವಸೆಯೊಂದಿಗೆ, 2005ರ ಡಿಸೆಂಬರ್‌ನಲ್ಲಿ ಕೇಂದ್ರ ಸರಕಾರವು ಜವಾಹರಲಾಲ್ ನೆಹರು ನಗರಪ್ರದೇಶ ಪುನರ್ನಿರ್ಮಾಣ ಕ್ರಿಯಾಯೋಜನೆಯನ್ನು ರಚಿಸಿತು. ಇದರ ಉದ್ದೇಶ, ಹಸಿವೆಯನ್ನು ಅರ್ಧದಷ್ಟು ಕಡಿಮೆ ಮಾಡುವ ಮೂಲಕ, ಬಡತನವನ್ನು ಕಡಿಮೆ ಮಾಡುವ ಮೂಲಕ ಹಾಗೂ ನೀರನ್ನು ಎಲ್ಲರಿಗೂ ದೊರಕುವಂತೆ ಮಾಡುವ ಮೂಲಕ "ಶತಮಾನದ ಅಭಿವೃದ್ಧಿಯ ಗುರಿ" ಗಳನ್ನು ಸಾಧಿಸುವುದೇ ಆಗಿತ್ತು. ಉದ್ದೇಶಿತ ಸುಧಾರಣೆಗಳಲ್ಲಿ ಹಲವಾರು ಸುಧಾರಣೆಗಳು ಪ್ರಗತಿಪರವಾಗಿದ್ದರೂ ಇಂಥ ಪ್ರಯತ್ನಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕವೇ ಮಾಡುವುದು ಅತ್ಯಂತ ಮುಖ್ಯ. ಹಾಗೂ ಇದು ಸಾಧ್ಯವಾಗಬೇಕಾದರೆ ಜನರ ಚುನಾಯಿತ ಪ್ರತಿನಿಧಿಗಳು ಈ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಕ್ರಿಯಾಶೀಲರೂ ಹಾಗೂ ವಿವೇಚನಾಪರರೂ ಆಗಿರಬೇಕಾಗಿರುವುದು ಆವಶ್ಯಕ.

ಚುನಾಯಿತ ಮಹಿಳಾ ಹಾಗೂ ಪುರುಷ ಪ್ರತಿನಿಧಿಗಳ ಕ್ರಿಯಾತ್ಮಕ ಶಕ್ತಿಯನ್ನು ಬೆಳೆಸಲು ಆಗುತ್ತಿರುವ ಪ್ರಯತ್ನಗಳನ್ನು, ಅವರು ತಮ್ಮ ತಮ್ಮ ಚುನಾವಣಾ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವ ಕ್ರಿಯೆಯ ಹಿನ್ನೆಲೆಯಲ್ಲಿ ನೋಡಬೇಕು. ಪರಿಸ್ಥಿತಿ ಉತ್ತಮಗೊಳ್ಳುವಂತೆ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿರುವ ಸಂಘಟನೆಗಳ, ಚುನಾಯಿತ ಪ್ರತಿನಿಧಿಗಳ ಹಾಗೂ ಜನ ಸಮುದಾಯಗಳ ಹಲವಾರು ಉದಾಹರಣೆಗಳಿವೆ. ಕರ್ನಾಟಕದ ನಗರಪ್ರದೇಶಗಳಲ್ಲಿ ಆಡಳಿತಾತ್ಮಕ ಹಾಗೂ ಆರ್ಥಿಕ ಸಮಸ್ಯೆಗಳ ಬಗ್ಗೆ ಕ್ರಿಯಾಶೀಲವಾಗಿರುವ ನಗರ ಸಂಶೋಧನಾ ಕೇಂದ್ರ ಇಂಥ ಒಂದು ಸಂಘಟನೆ. ಯೋಜನಾ ಪ್ರಕ್ರಿಯೆಯಲ್ಲಿ ಎಲ್ಲರೂ ಭಾಗವಹಿಸುವಂತೆ ಮಾಡುವ ಮೂಲಕ ಸ್ಥಳೀಯ ಗುಂಪುಗಳು ಹಾಗೂ ಚುನಾಯಿತ ಪ್ರತಿನಿಧಿಗಳ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವುದೇ ಈ ಸಂಘಟನೆಯ ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಇದಕ್ಕೆ ಇನ್ನೊಂದು ಮುಂದಿನ ಹೆಜ್ಜೆಯಾಗಿ, ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಸಂಬಂಧ ಪಟ್ಟಂತೆ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳಲು ನಗರ ಸಂಶೋಧನಾ ಕೇಂದ್ರ ಈ ಅಧ್ಯಯನವನ್ನು ಕೈಗೆತ್ತಿಕೊಂಡಿತು. ಚುನಾಯಿತ ಮಹಿಳಾ ಪ್ರತಿನಿಧಿಗಳ ಮೇಲೆ ಪ್ರಭಾವ ಬೀರುವ ವಿಷಯಗಳ ವಿಶ್ಲೇಷಣೆ ಹಾಗೂ ರಾಜಕೀಯ ಪಕ್ಷಗಳಲ್ಲಿ, ರಾಜ್ಯ ಸರಕಾರದಲ್ಲಿ ಹಾಗೂ ಇತರೆ ಸಂಘಟನೆಗಳ ಮೂಲಕ ಮಹಿಳಾ ಪ್ರತಿನಿಧಿಗಳಿಗೆ ಲಭ್ಯವಾಗುವ ಸಹಾಯಕ ಸೂತ್ರಗಳ ಅಧ್ಯಯನವೇ ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ನಗರಗಳ ಆಡಳಿತದಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡಲು ಆವಶ್ಯಕ ಕ್ರಮಗಳ ಚೌಕಟ್ಟೊಂದನ್ನು ರಚಿಸುವುದು ಈ ಅಧ್ಯಯನದಿಂದ ಸಾಧ್ಯವಾಗಬಹುದು ಎಂದು ನಂಬಲಾಗಿದೆ.

ಭಾರತದಲ್ಲಿ ಅಭಿವೃದ್ಧಿಯ ಪ್ರಕ್ರಿಯೆಗೆ ಸಂಬಂಧಿಸಿದ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ಸಾಧ್ಯವಾಗುವಂತೆ ಮಾಡಲು ಫ್ರೆಡರಿಕ್ ಈಬರ್ಟ ಸ್ಟಿಫ್ಟಂಗ್ ಸಂಸ್ಥೆ ಪುಸ್ತಕ ಹಾಗೂ ಪ್ರಬಂಧಗಳ ಒಂದು ಸರಣಿಯನ್ನೇ ಪ್ರಕಟಿಸುತ್ತಿದೆ. ಈ ಪ್ರಕಟಣೆ ಕೂಡ ಅದರದ್ದೇ ಒಂದು ಭಾಗ. ಫ್ರೆಡರಿಕ್ ಈಬರ್ಟ ಸ್ಟಿಫ್ಟಂಗ್ ಸಂಸ್ಥೆ, ಜರ್ಮನಿಯ ಸರಕಾರದಿಂದ ಬೆಂಬಲ ಪಡೆದಿರುವ ಹಾಗೂ ಲಾಭದ ಉದ್ದೇಶವಿರದ ಒಂದು ಸರಕಾರೇತರ ಸಂಘಟನೆ. ಜನತಾಂತ್ರಿಕ ಸಂರಚನೆಗಳನ್ನು ಸಬಲಗೊಳಿಸುವುದನ್ನೇ ಉದ್ದೇಶವಾಗಿಟ್ಟುಕೊಂಡಿರುವ ನಮ್ಮ ಸಂಘಟನೆ ಜರ್ಮನಿಯಲ್ಲಿ ಹಾಗೂ ಸಹೋದ್ಯೋಗಿ ಸಂಘಟನೆಗಳ ಜೊತೆ ಸೇರಿ ಇತರೆ 100 ಕ್ಕಿಂತ ಹೆಚ್ಚು ದೇಶಗಳಲ್ಲಿ ತರಬೇತಿ ನೀಡಲು ಹಾಗೂ ನೀತಿಗಳನ್ನು ರೂಪಿಸಲು ಸಹಾಯವಾಗುವಂತಹ ಸಂಶೋಧನೆಗಳನ್ನು ನಡೆಸಲು ಸಹಾಯ ಮಾಡುತ್ತಿದೆ. ಈ ಸಂಘಟನೆಯ ಭಾರತದ ಕಛೇರಿ, ನೀತಿಗಳನ್ನು ರೂಪಿಸುವವರೊಡನೆ, ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ಸಂಘಟನೆಗಳೊಡನೆ, ಸರಕಾರೇತರ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಟನೆಗಳೊಡನೆ ಜೊತೆ ಸೇರಿ ಕೆಲಸ ಮಾಡುತ್ತಿದೆ. ಲಿಂಗ ಸಂಬಂಧಿತ ಸಮಗ್ರ ನಿಲುವಿನ ಒಂದು ಭಾಗವಾಗಿ, ಫ್ರೆಡರಿಕ್ ಈಬರ್ಟ ಸ್ಟಿಫ್ಟಂಗ್ ಸಂಸ್ಥೆಯ ಮಹಿಳೆಯರ ಸಬಲೀಕರಣದ ಯೋಜನೆ, ಮಹಿಳೆಯರ ಆರ್ಥಿಕ ಹಾಗೂ ರಾಜಕೀಯ ಸಬಲೀಕರಣವನ್ನು ಗುರುಯಾಗಿಟ್ಟುಕೊಂಡಿರುವ ಸರಕಾರೇತರ ಹಾಗೂ ಇತರೆ ಸ್ವಸಹಾಯ ಗುಂಪುಗಳ ಪ್ರಯತ್ನಗಳಿಗೆ ಬೆಂಬಲ ನೀಡುತ್ತದೆ. ಆದುದರಿಂದ ಆದಾಯ ಹಾಗೂ ಜೀವನೋಪಾಯಗಳ ಸೃಷ್ಟಿ, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮಹಿಳೆಯರ ಪಾಲುದಾರಿಕೆ ಹಾಗೂ ಸ್ಥಳಾಂತರಗೊಂಡ ಮಹಿಳೆಯರ ಪುನರ್ಸ್ಥಾಪನೆ, ಇವು ನಮ್ಮ ಸಂಘಟನೆಯ ಆದ್ಯತೆಗಳಾಗಿವೆ. ಈ ಆದ್ಯತೆಗಳ ಸುತ್ತ ಕಾರ್ಯಾಗಾರಗಳನ್ನು, ದುಂಡುಮೇಜಿನ ಚರ್ಚೆಗಳನ್ನು ಕ್ರಿಯಾಧಾರಿತ ಸಂಶೋಧನೆಗಳನ್ನು ಹಾಗೂ ಪ್ರಕಟಣೆಗಳನ್ನು ಮಾಡುವುದು ನಮ್ಮ ಕ್ರಿಯಾಯೋಜನೆಯ ಅವಿಭಾಜ್ಯ ಅಂಗವಾಗಿವೆ.

ದಮಯಂತಿ ಶ್ರೀಧರನ್

ಯೋಜನಾ ಸಲಹಾಕಾರರು

ಫ್ರೆಡರಿಕ್ ಈಬರ್ಟ ಸ್ಟಿಫ್ಟಂಗ್, ಹೊಸದೆಹಲಿ

# ಒಳನೋಟ


| | | |
|---|---|---|
| 1. | ಹಿನ್ನೆಲೆ | 1 |
| 2. | ಚುನಾಯಿತ ಮಹಿಳಾ ಸದಸ್ಯರ ಬಗ್ಗೆ ಈಗಾಗಲೇ ಆಗಿರುವ ಅಧ್ಯಯನಗಳು. | 5 |
| 3. | ಪ್ರಸ್ತುತ ಅಧ್ಯಯನ | 6 |
| 4. | ಅಧ್ಯಯನದ ವಿಧಾನ | 8 |
| 5. | ಹೊರಮೂಡಿದ ಸಂಗತಿಗಳು | 10 |
| * | ಸಂದರ್ಶಿತರ ಪಾರ್ಶ್ವನೋಟ | 10 |
| * | ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರ ಪ್ರವೇಶ | 10 |
| * | ಮಹಿಳಾ ಸದಸ್ಯರು: ಬೆಂಬಲಗಳು ಹಾಗೂ ಅಡೆತಡೆಗಳು | 12 |
| * | ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರು: ನಿರೀಕ್ಷೆಗಳು | 13 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಪಾತ್ರದ ಸ್ಪಷ್ಟತೆ | 14 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಕೌನ್ಸಿಲ್ ಸಭೆಗಳು | 15 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಪಕ್ಷದ ನಿರ್ಬಂಧಗಳು | 17 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಸರಕಾರ ಹಾಗೂ ಅಧಿಕಾರಿ ವರ್ಗ | 18 |
| * | ನಗರಪಾಲಿಕೆಗಳಲ್ಲಿ ಮಹಿಳೆಯರು: ಕಾರ್ಯದಕ್ಷತೆಯ ನಿರೀಕ್ಷೆಗಳು | 20 |
| 6. | ಅಧ್ಯಯನದ ಫಲಿತಾಂಶಗಳು | 22 |
| 7. | ಸಹಾಯ ಸೂತ್ರಗಳು : ರಾಜಕೀಯ ಪಕ್ಷಗಳಿಗಾಗಿ | 24 |
| 8. | ಸಹಾಯ ಸೂತ್ರಗಳು : ರಾಜ್ಯ ಸರ್ಕಾರಗಳಿಗಾಗಿ | 27 |

# 1. ಹಿನ್ನೆಲೆ

## ನಗರಾಡಳಿತ ಸಂಸ್ಥೆಗಳ ಸಂವೈಧಾನಿಕ ಸ್ಥಾನ:

ಭಾರತದ ಸಂವಿಧಾನದ 74ನೆಯ ತಿದ್ದುಪಡಿ ನಗರಾಡಳಿತ ಸಂಸ್ಥೆಗಳಿಗೆ ಸಂವಿಧಾನದಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿತು. ಅಷ್ಟೇ ಅಲ್ಲ, ಅವು ಸ್ಥಳೀಯ ಸ್ವಾಡಳಿತದ ಸಂಸ್ಥೆಗಳಾಗಿ ಕೆಲಸ ಮಾಡುವಂತೆ ಅವಕಾಶ ಕಲ್ಪಿಸುವುದರ ಜೊತೆಗೆ ಅವುಗಳಿಗೆ ಆವಶ್ಯಕ ಅಧಿಕಾರಗಳನ್ನೂ ನೀಡಿತು. ಇನ್ನೂ ಹಲವಾರು ಬದಲಾವಣೆಗಳು ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡಿವೆ : ವಾರ್ಡಗಳು ಎಂದು ಕರೆಯಲಾಗುತ್ತಿರುವ ಏಕ ಸದಸ್ಯತ್ವದ ಮತದಾರ ಕ್ಷೇತ್ರಗಳು, ಮೂರರಲ್ಲಿ ಒಂದು ಭಾಗಕ್ಕಿಂತ ಕಡಿಮೆ ಇಲ್ಲದಂತೆ ಸದಸ್ಯತ್ವ ಹಾಗೂ ಅಧಿಕಾರ ಸ್ಥಾನಗಳಲ್ಲಿ ಮಹಿಳೆಯರಿಗೆ ನೀಡಲಾಗಿರುವ ಮೀಸಲಾತಿ, ಒಟ್ಟು ಜನಸಂಖ್ಯೆಯಲ್ಲಿ ಅವರವರ ಜನಸಂಖ್ಯೆಗಳ ಪ್ರಮಾಣಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ನೀಡಲಾಗಿರುವ ಮೀಸಲಾತಿ ಇತ್ಯಾದಿ. ಈಗ ಸ್ಥಳೀಯ ಸಂಸ್ಥೆಗಳ ಐದು ವರ್ಷಗಳ ಅಧಿಕಾರಾವಧಿ ಮುಗಿಯುವುದಕ್ಕಿಂತ ಮೊದಲೇ ಅಥವಾ ಅವುಗಳನ್ನು ರದ್ದು ಮಾಡಿದ ಪಕ್ಷದಲ್ಲಿ ಹಾಗೆ ರದ್ದು ಮಾಡಿದ ಆರು ತಿಂಗಳುಗಳ ಒಳಗಾಗಿ ಚುನಾವಣೆಗಳನ್ನು ನಡೆಸುವುದು ಕಡ್ಡಾಯವಾಗಿದೆ.

## ನಗರಾಡಳಿತ ಸಂಸ್ಥೆಗಳ ಸಂರಚನೆ

ಭಾರತದ ಜನಸಂಖ್ಯೆಯಲ್ಲಿ ಶೇಕಡ 30 ರಷ್ಟು ಜನ ನಗರಪ್ರದೇಶಗಳಲ್ಲಿ ವಾಸಿಸುತ್ತಾರೆ. ಹಾಗೆಯೇ ಭಾರತದಲ್ಲಿ ಮಹಾನಗರಪಾಲಿಕೆಗಳು, ನಗರಸಭೆಗಳು, ಪುರಸಭೆಗಳು ಹಾಗೂ ಪಟ್ಟಣ ಪಂಚಾಯತಿಗಳಂತಹ 3,641 ನಗರಾಡಳಿತ ಸಂಸ್ಥೆಗಳಿವೆ. ಈ ಸಂಸ್ಥೆಗಳಲ್ಲಿ 69,704 ಚುನಾಯಿತ ಸದಸ್ಯರಿದ್ದಾರೆ. ಇವರಲ್ಲಿ ಮೂರರಲ್ಲಿ ಒಂದು ಭಾಗ ಮಹಿಳೆಯರಿದ್ದಾರೆ. ಕರ್ನಾಟಕದಲ್ಲಿ 270 ನಗರಾಡಳಿತ ಸಂಸ್ಥೆಗಳಿವೆ ಹಾಗೂ ಅವುಗಳಲ್ಲಿ 5,004 ಚುನಾಯಿತ ಸದಸ್ಯರಿದ್ದಾರೆ. 1999 ರಲ್ಲಿ ಟೆಕ್ನಾಲಾಜಿ ಇನ್ಫೊರ್ಮೆಟಿಕ್ಸ ಡಿಸೈನ್ ಎಂಡೀವರ್ ಎಂಬ ಸಂಸ್ಥೆ ಕೈಗೊಂಡ ಕರ್ನಾಟಕದ ಏಳು ನಗರಗಳ ಒಂದು ಅಧ್ಯಯನ, ನಗರಪ್ರದೇಶಗಳ ಆಡಳಿತದಲ್ಲಿ ಚುನಾಯಿತ ಸದಸ್ಯರು ಒಂದು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ ಎಂಬುದನ್ನು ತೋರಿಸಿಕೊಟ್ಟಿದೆ. ಇವರು ಜನತೆ ಹಾಗೂ ಜನತೆಗೆ ಅತ್ಯಂತ ಹತ್ತಿರದ ಸರಕಾರದ ಘಟಕವಾದ ನಗರಪಾಲಿಕೆಗಳ ನಡುವಣ ಕೊಂಡಿಯಾಗಿರುತ್ತಾರೆ.

## ನಗರಪಾಲಿಕೆಗಳ ಮಹಿಳಾ ಸದಸ್ಯರು, ಅವರ ಹಿನ್ನೆಲೆ ಹಾಗೂ ಸ್ಥಾನಮಾನ

ನಗರಪ್ರದೇಶಗಳ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಈ ನಗರಪಾಲಿಕೆ (ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ) ಗಳಲ್ಲಿ ಮಹಿಳಾ ಪ್ರತಿನಿಧಿಗಳು ಒಂದು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ವಿಶೇಷವಾಗಿ ಮಹಿಳೆಯರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ, ಅಂದರೆ ಅಲೆದು ಮಾರಾಟ ಮಾಡುವ ಮಹಿಳಾ ಮಾರಾಟಗಾರರು, ಸಣ್ಣ ಅಂಗಡಿ ಇಟ್ಟುಕೊಂಡಿರುವ ಮಹಿಳೆಯರು, ವಯಸ್ಕ ಮಹಿಳೆಯರು, ತ್ಯಜಿಸಲ್ಪಟ್ಟ ಹಾಗೂ ತೊಂದರೆಗೀಡಾ ಗಿರುವ ಮಹಿಳೆಯರು ಹಾಗೂ ಬಡತನದ ಸ್ಥಿತಿಯಲ್ಲಿ ಬದುಕುತ್ತಿರುವ ಮಹಿಳೆಯರು ಮುಂತಾದವರ ಬಗ್ಗೆ ಅವರು ವಿಶೇಷ ಆಸಕ್ತಿ ವಹಿಸುತ್ತಿದ್ದಾರೆ. ಆದರೆ ಈ ಮಹಿಳಾ ಪ್ರತಿನಿಧಿಗಳು ಹಲವಾರು ನಿರ್ಬಂಧಗಳ ಮಧ್ಯೆ ತಮ್ಮ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಮಹಿಳಾ ಪ್ರತಿನಿಧಿಗಳು, ಕೊನೆಯ ಪಕ್ಷ ತಮ್ಮ ಅಧಿಕಾರಾವಧಿಯ ಮೊದಲ ಹಲವು ವರ್ಷಗಳಲ್ಲಿ, ತಮ್ಮ ತಂದೆ, ಗಂಡ, ಸಹೋದರ ಮೊದಲಾದ ಹತ್ತಿರದ ಪುರುಷ ಸಂಬಂಧಿಕರನ್ನು ಅವಲಂಬಿಸಬೇಕಾಗಿ ಬರುತ್ತದೆ. ಇದುವರೆಗೆ ತಾವು ತಮ್ಮ ಮನೆಗಳಲ್ಲಿ ವಹಿಸುತ್ತಿರುವ

ತಾಯಿ, ಹೆಂಡತಿ ಹಾಗೂ ಸಹೋದರಿಯರ ಪಾತ್ರಗಳಿಂದ ನಗರಪಾಲಿಕೆಗಳ ಚುನಾಯಿತ ಪ್ರತಿನಿಧಿಯ ಪಾತ್ರದ ವರೆಗಿನ ಸಂಕ್ರಮಣವನ್ನು ಸಾಧಿಸುವುದು ಅಥವಾ ಕನಿಷ್ಠ ಇವೆರಡೂ ಪಾತ್ರಗಳನ್ನು ಸಮಾನಾಂತರವಾಗಿ ನಿರ್ವಹಿಸಬೇಕಾಗಿರುವುದು ಈಗ ಅವರ ಮುಂದಿರುವ ಮುಖ್ಯ ಸವಾಲಾಗಿದೆ.

ನಗರಪಾಲಿಕೆಗಳ ಮಹಿಳಾ ಪ್ರತಿನಿಧಿಗಳಿಗೆ ಅವರವರ ರಾಜಕೀಯ ಪಕ್ಷಗಳಿಂದ ಸಾಕಷ್ಟು ಬೆಂಬಲ ದೊರಕುತ್ತಿಲ್ಲ. ಸಮಾಜ ಕಾರ್ಯಕರ್ತೆ ಯರಾಗಿ, ಶಿಕ್ಷಕಿಯರಾಗಿ, ಸಣ್ಣ ವ್ಯಾಪಾರಸ್ಥರಾಗಿ, ಸ್ಥಳೀಯ ಸಂಘ ಸಂಸ್ಥೆಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಅಥವಾ ಜನಪರ ಆಂದೋಲನ ಗಳಲ್ಲಿ ಕೆಲಸ ಮಾಡುವ ಮೂಲಕ ಅವರು ಪಡೆದಿರುವ ಅವರ ಹಿಂದಿನ ಅನುಭವ, ನಗರಪಾಲಿಕೆಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡುವಲ್ಲಿ ಅವರಿಗೆ ಪ್ರಾರಂಭಿಕ ಪ್ರೋತ್ಸಾಹವನ್ನು ನೀಡಬಹುದಷ್ಟೇ. ಆದರೆ ವಾರ್ಡಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸುತ್ತ, ಅಭಿವೃದ್ಧಿಯ ಕಾಮಗಾರಿಗಳನ್ನು ಮಾಡಿಸುತ್ತ, ಸಾರ್ವಜನಿಕ ಸಂಬಂಧಗಳನ್ನು ಉಳಿಸಿಕೊಳ್ಳುವ ಕೆಲಸಗಳನ್ನು ಮಾಡುತ್ತ ಮಾಡುತ್ತಲೇ ಅವರಿಗೆ ಚುನಾಯಿತ ಪ್ರತಿನಿಧಿಗಳಾಗಿ ಕೆಲಸ ಮಾಡುವ ಅನುಭವ ನಿಧಾನವಾಗಿ ಕರಗತವಾಗುತ್ತದೆ.

> *ಮಹಿಳಾ ಪ್ರತಿನಿಧಿಗಳ ಬೆಳವಣಿಗೆಗಳ ಅವಕಾಶಗಳು ಸಮಾಜದಲ್ಲಿ, ನಗರಪಾಲಿಕೆಗಳಲ್ಲಿ ಹಾಗೂ ರಾಜಕೀಯ ಪಕ್ಷಗಳ ಒಳಗೆ ಹಾಗೂ ಹೊರಗೆ ಅಸ್ತಿತ್ವದಲ್ಲಿರುವ ಲಿಂಗ ಆಧಾರಿತ ಅಸಮಾನತೆಗಳಿಂದಾಗಿ ನಿರ್ಬಂಧಿತವಾಗಿವೆ.*

## ನಗರಪಾಲಿಕೆಗಳ ಮಹಿಳಾ ಸದಸ್ಯರು ಹಾಗೂ ರಾಜಕೀಯ ಪಕ್ಷಗಳು

ಭಾರತದಲ್ಲಿ ಆಡಳಿತದ ಎಲ್ಲಾ ಆರೂ ಸ್ತರಗಳಲ್ಲಿ ರಾಜಕೀಯ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಹೊಂದಿವೆ. ನಗರಾಡಳಿತ ಸಂಸ್ಥೆಗಳಲ್ಲಿ, ಅಂದರೆ ಗ್ರಾಮ ಪಂಚಾಯತಿಗಳಿಗೆ ಸಮಾನಾಂತರವಾಗಿರುವ ಪಟ್ಟಣ ಪಂಚಾಯತಿಗಳಲ್ಲಿ, ತಾಲುಕಾ ಪಂಚಾಯತಿಗಳಿಗೆ ಸಮಾನಾಂತರವಾಗಿರುವ ನಗರಪಾಲಿಕೆಗಳಲ್ಲಿ, ಜಿಲ್ಲಾ ಪಂಚಾಯತಿಗಳಿಗೆ ಸಮಾನಾಂತರವಾಗಿರುವ ಮಹಾನಗರ ಪಾಲಿಕೆಗಳಲ್ಲಿ, ರಾಜ್ಯ ಮಟ್ಟದ ವಿಧಾನ ಸಭೆಗಳಲ್ಲಿ ಹಾಗೂ ವಿಧಾನ ಪರಿಷತ್ತುಗಳಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ರಾಜಕೀಯ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಹೊಂದಿರುತ್ತವೆ. ಆದರೆ ಈ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರನ್ನು ರಾಜಕೀಯ ಶ್ರೇಣಿಕೃತ ವ್ಯವಸ್ಥೆಯಲ್ಲಿ ವಿಧಾನ ಮಂಡಲದ ಹಾಗೂ ಸಂಸತ್ತಿನ ಸದಸ್ಯರಿಗಿಂತ ಕೆಳಮಟ್ಟದಲ್ಲಿರುವವರೆಂದು ಪರಿಗಣಿಸಲಾಗುತ್ತದೆ.

ರಾಜಕೀಯ ಪಕ್ಷಗಳ ಸಂರಚನೆಯಲ್ಲಿ ಅಡಕವಾಗಿರುವ ಈ ಶ್ರೇಣಿಕೃತ ವ್ಯವಸ್ಥೆಯ ವಿವಿಧ ಪದರುಗಳ ಮೂಲಕವೇ ಸ್ಥಳೀಯ ಸಂಸ್ಥೆಯ ಸದಸ್ಯರು ಬೆಳೆದುಕೊಂಡು ಬರುತ್ತಾರೆ. ಈ ರಾಜಕೀಯ ಪ್ರಕ್ರಿಯೆಯಲ್ಲಿ ಅವರು ಅತ್ಯಂತ ಕಠಿಣವಾದ ಪೈಪೋಟಿಯನ್ನು ಎದುರಿಸುತ್ತಾರೆ. ಇದಲ್ಲದೇ ಮಹಿಳಾ ಸದಸ್ಯರು ಲಿಂಗಭೇದ ದಿಂದ ಉಂಟಾಗುವ ಅನಾನುಕೂಲತೆಗಳನ್ನು ಎದುರಿಸಬೇಕಾಗುತ್ತದೆ. ಪಕ್ಷದ ಹಾಗೂ ಸರಕಾರದ ಮುಖಂಡರು, ನಗರಪಾಲಿಕೆಗಳ ಪ್ರತಿನಿಧಿಗಳನ್ನು ಸಣ್ಣ ಸಣ್ಣ ನಗರ ಪ್ರದೇಶಗಳನ್ನು ನೋಡಿಕೊಳ್ಳಬೇಕಾಗಿರುವ 'ಸೈನಿಕರು' ಎಂದೇ ಪರಿಗಣಿಸುತ್ತಾರೆ. ನೀತಿಗಳನ್ನು ರೂಪಿಸುವಲ್ಲಿ ಅವರ ತೊಡಗುವಿಕೆ ಹಾಗೂ ನೀತಿಗಳಿಗೆ ಸಂಬಂಧಪಟ್ಟಂತೆ ಅವರ ಅಭಿಪ್ರಾಯಗಳಿಗೆ ಕೊಡಲಾಗುವ ಬೆಲೆಗಳು ಅಷ್ಟಕ್ಕಷ್ಟೇ ಎಂದು ಹೇಳಬೇಕು.

ರಾಜಕೀಯ ಪಕ್ಷಗಳಿಗೆ ಒಂದು ಸ್ಪಷ್ಟವಾದ ಸಂಘಟನಾತ್ಮಕ ಸಂರಚನೆ ಇರುತ್ತದೆ. ಪಕ್ಷದ ಗುರಿಗಳನ್ನು ಸಾಧಿಸಲು ಇವುಗಳಲ್ಲಿ, ಸದಸ್ಯತ್ವದ, ಸದಸ್ಯರ ಪಾತ್ರಗಳ, ಜವಾಬ್ದಾರಿಗಳ ಹಾಗೂ ವಿವಿಧ ಸ್ತರಗಳಲ್ಲಿ ಕೆಲಸಗಳನ್ನು ಹಂಚಿಕೊಡಲು, ಅಳತೆಗೋಲುಗಳು ಇರುತ್ತವೆ. ಜೊತೆಗೆ ಪಕ್ಷಗಳು ಚುನಾವಣೆಗಳ ಸಂದರ್ಭದಲ್ಲಿ ನಗರಾಡಳಿತ ಸಂಸ್ಥೆಗಳ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ತಮ್ಮ ಕಾಳಜಿಗಳನ್ನು ವಿವರಿಸುವ ಚುನಾವಣಾ ಘೋಷಣಾ ಪತ್ರಗಳನ್ನೂ ಪ್ರಕಟಿಸುತ್ತವೆ.

ನಗರಪಾಲಿಕೆಗಳ ಚುನಾಯಿತ ಸದಸ್ಯರಿಗೆ ರಾಜಕೀಯ ಪಕ್ಷಗಳು ಕೊಡುವ ಬೆಂಬಲ ಅತ್ಯಂತ ಹೆಚ್ಚಿನ ಮಹತ್ವ ಪಡೆಯುತ್ತದೆ, ಏಕೆಂದರೆ ಪಕ್ಷದ ಆದ್ಯತೆಗಳು ಹಾಗೂ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರಾಗಿ ಆ ಪಕ್ಷದ ಸದಸ್ಯರು ತಮ್ಮ ಪಾತ್ರಗಳನ್ನು ನಿರ್ವಹಿಸುವುದರ ಮಧ್ಯೆ ಒಂದು ನೇರವಾದ ಸಂಬಂಧ ಇರುತ್ತದೆ. ಆದರೂ ಕೂಡ ಚುನಾವಣಾ ಪ್ರಣಾಳಿಕೆಯನ್ನು ಹೇಗೆ ಕಾರ್ಯರೂಪಕ್ಕೆ ತರಬೇಕು, ಇದಕ್ಕಾಗಿ ಹೇಗೆ ಹಾಗೂ ಯಾವಾಗ ಈ ಪ್ರತಿನಿಧಿಗಳ ಸಾಮರ್ಥ್ಯವನ್ನು ಹೆಚ್ಚಿಸಬೇಕು ಎಂಬ ಬಗ್ಗೆ ರಾಜಕೀಯ ಪಕ್ಷಗಳಿಗೆ ಕಾಳಜಿ ಇದ್ದಹಾಗೆ ಕಾಣುವುದಿಲ್ಲ.

## ಮಹಿಳಾ ಪ್ರತಿನಿಧಿಗಳು ಮತ್ತು ರಾಜ್ಯ ಸರಕಾರ

**ನಗರಪಾಲಿಕೆಗಳನ್ನು ನಿಯಂತ್ರಿಸುವ ಕಾನೂನುಗಳು:** 1956ರಲ್ಲಿ ಕರ್ನಾಟಕ ರಾಜ್ಯದ ಪುನರ್ಸಂಘಟನೆ ಯಾದಾಗ ನಗರಪಾಲಿಕೆಗಳ ರಚನೆ ಹಾಗೂ ಕಾರ್ಯಕ್ಷೇತ್ರಗಳ ಬಗ್ಗೆ ಹಳೆಯ ಮೈಸೂರು, ಮುಂಬಯಿ ಹಾಗೂ ಹೈದರಾಬಾದ ಕರ್ನಾಟಕಗಳಲ್ಲಿ ಬೇರೆ ಬೇರೆ ಕಾನೂನುಗಳಿದ್ದವು. ಈ ಬಗ್ಗೆ ಸದ್ಯ ಎರಡು ಕಾನೂನುಗಳು ಜಾರಿಯಲ್ಲಿವೆ. ಸಣ್ಣ ನಗರಗಳಿಗಾಗಿ 1964ರ ಕರ್ನಾಟಕ ನಗರಪಾಲಿಕೆಗಳ ಕಾನೂನು ಹಾಗೂ ದೊಡ್ಡ ನಗರಗಳಿಗಾಗಿ 1976ರ ಕರ್ನಾಟಕ ಮಹಾನಗರಪಾಲಿಕೆಗಳ ಕಾನೂನು. ಈ ಕಾನೂನುಗಳಲ್ಲಿ ಚುನಾಯಿತ ಸದಸ್ಯರ ಪಾತ್ರ ಹಾಗೂ ಜವಾಬ್ದಾರಿಗಳ ಬಗ್ಗೆಯೂ ಹೇಳಲಾಗಿದೆ.

ನಗರಪಾಲಿಕೆಗಳ ಸ್ವಾಯತ್ತತೆಯ ಬಗೆಗಿನ ಪ್ರಶ್ನೆಗಳು, ಇವುಗಳ ಮೇಲೆ ರಾಜ್ಯ ಮಟ್ಟದ ಆಡಳಿತ ಘಟಕಗಳು ಚಲಾಯಿಸುವ ಪ್ರಭುತ್ವ ಹಾಗೂ ಮೀಸಲಾತಿಯ ಬಗ್ಗೆ ಮತ್ತು ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸುವ ಬಗ್ಗೆ ರಾಜ್ಯ ಸರಕಾರಕ್ಕಿರುವ ಅಧಿಕಾರಗಳು, ನಗರಪಾಲಿಕೆಗಳ ವಿಶ್ವಾಸಾರ್ಹತೆಯನ್ನು ಕುಗ್ಗಿಸಿವೆ. ಅಭಿವೃದ್ಧಿಗಾಗಿ ಅನುದಾನ ನೀಡುವ ವಿದೇಶಗಳ ಆರ್ಥಿಕ ನೀತಿಯ ಅಂಗವಾಗಿ ಹಾಗೂ ವಿಶ್ವದ ಆರ್ಥಿಕ ಪ್ರಸರಣಗಳ ಅಂಗವಾಗಿ ನಗರಪಾಲಿಕೆಗಳು ಈಗ ವಿಶ್ವದ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ಸಹಾಯವನ್ನು ಪಡೆಯಬೇಕಾಗಿ ಬಂದಿರುವುದರಿಂದ ನಗರಪಾಲಿಕೆಗಳ ವಿಶ್ವಾಸಾರ್ಹತೆ ಇನ್ನೂ ಕುಗ್ಗಿಹೋಗಿದೆ. ಆದರೆ ಈ ವಿಶ್ವ ಹಣಕಾಸಿನ ಸಂಸ್ಥೆಗಳ ಆರ್ಥಿಕ ಸಹಾಯ ಹಾಗೂ ಅದು ನೀತಿಗಳನ್ನು ನಿರ್ಧರಿಸುವ ಅಧಿಕಾರದ ಮೇಲೆ ಬೀರುವ ಪ್ರಭಾವಗಳು, ಸಾಮಾಜಿಕ ನ್ಯಾಯ, ಸಾಮಾಜಿಕ ಅಭಿವೃದ್ಧಿ ಹಾಗೂ ಪ್ರಜಾಪ್ರಭುತ್ವದ ಹಿತಾಸಕ್ತಿಗಳನ್ನು ಕಾಪಾಡುವ ಜವಾಬ್ದಾರಿಯನ್ನೂ ರಾಜ್ಯ ಸರಕಾರಗಳ ಮೇಲೆ ಹೊರಿಸುತ್ತವೆ.

## ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಲ್ಲಿ ಇರುವ ಅಡೆತಡೆಗಳು ಹಾಗೂ ಮಾರ್ಗೋಪಾಯಗಳು

**ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಲ್ಲಿ ಇರುವ ಅಡೆತಡೆಗಳು:** ನಗರಪಾಲಿಕೆಗಳ ಚುನಾಯಿತ ಸದಸ್ಯರಿಗೆ ರಾಜಕೀಯ ಪಕ್ಷಗಳ ಹಾಗೂ ರಾಜ್ಯ ಸರಕಾರಗಳ ಸಾಂಸ್ಥಿಕ ಬೆಂಬಲ ಇಲ್ಲದಿರುವುದು ಒಂದು ಗತಿರಹಿತ ಸ್ಥಿತಿಯನ್ನು ಉಂಟುಮಾಡಿದೆ. ಭಾರತದಲ್ಲಿ ಹಾಗೂ ದಕ್ಷಿಣ ಏಶಿಯಾದಲ್ಲೇ, ರಾಜಕೀಯವು

ಪರಂಪರಾಗತವಾಗಿ ಗಂಡಸರ ಕಾರ್ಯಕ್ಷೇತ್ರವಾಗಿ ಉಳಿದಿದೆ. ಮೀಸಲಾತಿ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಭಾಗವಹಿಸುವಿಕೆ, ಇವು ಭಾರತದಲ್ಲಿ ಪ್ರಾರಂಭಿಸಲಾಗಿರುವ ಮಹಿಳೆಯರ ಸಬಲೀಕರಣದ ಪ್ರಕ್ರಿಯೆಯ ಪ್ರಮುಖ ಅಂಶಗಳು. ಮಹಿಳೆಯರು ಮುಂದೆ ಬರಲು ರಾಜಕೀಯ ಪಕ್ಷಗಳು ಸಾಕಷ್ಟು ಪ್ರೋತ್ಸಾಹ ಕೊಟ್ಟಿಲ್ಲ ಎಂಬುದು ಸ್ಪಷ್ಟವಾಗಿದೆ. ಮಹಿಳೆಯರಿಗೆ ಮೀಸಲಾತಿ ನೀಡುವ ಕಾನೂನು ಅವರಿಗೆ ಸದಸ್ಯರ ಹಾಗೂ ಅಧಿಕಾರದ ಸ್ಥಾನಗಳಲ್ಲಿ **'ಮೂರನೆಯ ಒಂದು ಭಾಗಕ್ಕಿಂತ ಕಡಿಮೆ ಇಲ್ಲದಂತೆ'** ಮೀಸಲಾತಿ ಕೊಡಬೇಕೆಂದು ಹೇಳಿದ್ದರೂ ಇದನ್ನು ಕನಿಷ್ಠ ಎಂದು ಪರಿಗಣಿಸದೇ ಗರಿಷ್ಠ ಎಂದು ಪರಿಗಣಿಸಲಾಗುತ್ತಿದೆ. ಮಹಿಳೆಯರ ವಿರುದ್ಧ ಹಿಂಸೆ, ಮನೋಭಾವನೆಗಳು, ದೃಷ್ಟಿಕೋನಗಳು, ಅವರ ಚಲನವಲನಕ್ಕಿರುವ ನಿರ್ಬಂಧಗಳು, ರಾಜಕೀಯ ಮನೋಬಲದ ಕೊರತೆ, ಬೆದರಿಕೆಗಳು, ಅವರ ವಿರುದ್ಧ ಅಸಹ್ಯ ಪ್ರಚಾರ, ಸರಕಾರಗಳಲ್ಲಿ ಹಾಗೂ ರಾಜಕೀಯ ಪಕ್ಷಗಳಲ್ಲಿ ಇರುವ ಮಹಿಳೆಯರ ಬಗ್ಗೆ ಸ್ನೇಹಪರವಲ್ಲದ ಸಂರಚನೆಗಳು, ಇವು ಮಹಿಳೆಯರು ರಾಜಕೀಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದಕ್ಕೆ ಪ್ರಮುಖ ಅಡೆತಡೆಗಳಾಗಿವೆ.

ಈ ಆಂತರಿಕ ಅಡೆತಡೆಗಳು ನಗರಪಾಲಿಕೆಗಳ ಚುನಾಯಿತ ಸದಸ್ಯರ ಪಾತ್ರವನ್ನು ಮಸಕುಗೊಳಿಸುತ್ತವೆ ಅಲ್ಲದೇ ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಮುಂದುವರಿಸುವಲ್ಲಿ ಅವರ ತೊಡಗುವಿಕೆಯನ್ನು ನಿರ್ಬಂಧಿತಗೊಳಿಸುತ್ತವೆ. ಈ ಪರಿಸ್ಥಿತಿ ಒಂದು ವಿಷವರ್ತುಲವನ್ನು ನಿರ್ಮಿಸುತ್ತದೆ. ಈ ವಿಷವರ್ತುಲದಲ್ಲಿ ಸದಸ್ಯರು ತಮ್ಮ ತಮ್ಮ 'ಕೆಲಸ'ಗಳನ್ನು ಮಾಡಿಕೊಳ್ಳುವಲ್ಲಿ ವ್ಯಸ್ತರಾಗಿ ಬಿಡುತ್ತಾರೆ, ರಾಜಕೀಯ ಹೊಡೆದಾಟಗಳಲ್ಲಿ ತೊಡಗಿಕೊಳ್ಳುತ್ತಾರೆ ಹಾಗೂ ಈ ಕಾರಣಗಳಿಂದ ಅವುಗಳಿಂದಾಚೆ ನೋಡುವಲ್ಲಿ ಅಸಮರ್ಥರಾಗುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಮಹಿಳಾ ಸದಸ್ಯರ ಸ್ಥಿತಿಯಂತೂ ಇನ್ನೂ ಚಿಂತಾಜನಕವಾಗಿದೆ.

**ಪರಿಣಾಮಕಾರಿ ಪಾಲ್ಗೊಳ್ಳುವಿಕೆಗೆ ಮಾರ್ಗೋಪಾಯಗಳು:** ಮಹಿಳೆಯರ ಭಾಗವಹಿಸುವಿಕೆಗೆ ಇರುವ ವಿರೋಧದ ಸಮಸ್ಯೆ, ಅವರ ಕಾರ್ಯಕ್ಷಮತೆಯ ಮೇಲೆ ದುಷ್ಪರಿಣಾಮ ಬೀರುವ ಲಿಂಗಭೇದದ ಸಮಸ್ಯೆ, ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ರಾಜಕೀಯ ಪಕ್ಷಗಳ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ತೊಡಗಲು ಸಾಧ್ಯವಾಗದೇ ಇರುವುದು, ಇವೆಲ್ಲವನ್ನೂ ಗಂಭೀರವಾಗಿ ಪರಿಗಣಿಸುವ ಆವಶ್ಯಕತೆ ಇದೆ. ನಗರಪ್ರದೇಶಗಳ ಆಡಳಿತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಪ್ರಸಕ್ತ ಮಾರ್ಗೋಪಾಯಗಳ ವಿಶ್ಲೇಷಣೆ ಹಾಗೂ ಅವುಗಳನ್ನು ಹೆಚ್ಚಿಸುವ ಸಾಧ್ಯತೆಗಳನ್ನು ಸಧ್ಯದ ಪರಿಸ್ಥಿತಿಯಲ್ಲಿ ಅರ್ಥಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ.

## 2. ಚುನಾಯಿತ ಮಹಿಳಾ ಸದಸ್ಯರ ಬಗ್ಗೆ ಈಗಾಗಲೇ ಮಾಡಿರುವ ಅಧ್ಯಯನಗಳು

**ಗ್ರಾಮಾಂತರ ಪ್ರದೇಶಗಳ ಚುನಾಯಿತ ಮಹಿಳಾ ಸದಸ್ಯರ ಬಗ್ಗೆ ಈಗಾಗಲೇ ಮಾಡಿರುವ ಅಧ್ಯಯನ ಗಳು:** ಇದುವರೆಗೆ ಮಾಡಲಾದ ಅಧ್ಯಯನಗಳು ಗ್ರಾಮ ಪಂಚಾಯತಿಗಳು ಮೊದಲಾದ ಗ್ರಾಮಾಂತರ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತರಾದ ಮಹಿಳಾ ಸದಸ್ಯರನ್ನೇ ಕೇಂದ್ರ ವಾಗಿಟ್ಟುಕೊಂಡು ಮಾಡಿರುವ ಅಧ್ಯಯನಗಳಾಗಿವೆ. 'ಮಹಿಳೆಯರು ಮತ್ತು ಅವರ ರಾಜಕೀಯ ಸಬಲೀಕರಣ' ಮೊದಲಾದ ವಿಷಯಗಳ ಬಗ್ಗೆ ಸಮಾಜ ವಿಜ್ಞಾನಗಳ ಸಂಸ್ಥೆ ಅಧ್ಯಯನ ಮಾಡಿದೆ. 'ಲಿಂಗ ಮತ್ತು ಸ್ಥಳೀಯ ಆಡಳಿತ, ಅಭಿವೃದ್ಧಿಯ ಮೇಲೆ ಅವುಗಳ ಪರಿಣಾಮಗಳು' ಎಂಬ ವಿಷಯದ ಬಗ್ಗೆ ಸಾಮಾಜಿಕ ಸಂಶೋಧನೆಯ ಕೇಂದ್ರ ಅಧ್ಯಯನ ಮಾಡಿದೆ. ಹಾಗೆಯೇ 'ಸ್ಥಳೀಯ ಆಡಳಿತದಲ್ಲಿ ಲಿಂಗಾಧಾರಿತ ಮಾದರಿ – ಒಂದು ಭಾರತೀಯ ಅನುಭವ' ಎಂಬ ವಿಷಯದ ಬಗ್ಗೆ ಪಿ.ಆರ್.ಐ.ಎ. ಸಂಸ್ಥೆ ಅಧ್ಯಯನ ಮಾಡಿದೆ.

**ನಗರ ಪ್ರದೇಶಗಳ ಚುನಾಯಿತ ಮಹಿಳಾ ಸದಸ್ಯರ ಬಗ್ಗೆ ಈಗಾಗಲೇ ಮಾಡಿರುವ ಅಧ್ಯಯನಗಳು:** ನಗರ ಪ್ರದೇಶಗಳ ಆಡಳಿತದಲ್ಲಿ ಚುನಾಯಿತ ಮಹಿಳಾ ಸದಸ್ಯರ ಪಾತ್ರ ಹಾಗೂ ಅವರು ಆಡಳಿತದಲ್ಲಿ ಭಾಗವಹಿಸುವುದಕ್ಕೆ ನೆರವು ನೀಡುವಲ್ಲಿ ರಾಜಕೀಯ ಪಕ್ಷಗಳ ಪಾತ್ರ ಈ ಮೊದಲಾದ ವಿಷಯಗಳ ಬಗ್ಗೆ ಮಾಡಿರುವ ಅಧ್ಯಯನಗಳು ಬಹಳ ಕಡಿಮೆ. 'ನಗರಪ್ರದೇಶಗಳ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರು : ದೆಹಲಿ ಮಹಾನಗರ ಪಾಲಿಕೆಯ ಚುನಾವಣೆಗಳ ಒಂದು ಅಧ್ಯಯನ' (ಯುನಿಫೆಮ್) ಎಂಬ ಬಗ್ಗೆ ಒಂದು ಸಂಸ್ಥೆ ಅಧ್ಯಯನವನ್ನು ಮಾಡಿದೆ. ಯುನಿಫೆಮ ಜೊತೆ ಸೇರಿ ಸಿಂಗಮ್ಮ ಶ್ರೀನಿವಾಸನ್ ಸಂಸ್ಥೆಯವರು 'ಕೆಳಹಂತದಿಂದ ಮುಂಗಡ ಪತ್ರಗಳ ರಚನೆ' ಎಂಬ ಅಧ್ಯಯನ ಮಾಡಿದ್ದಾರೆ. 'ಭಾರತದ ನಗರಪ್ರದೇಶಗಳ ಸ್ಥಳೀಯ ಸರಕಾರಗಳಲ್ಲಿ ಮಹಿಳೆಯರು – ದೆಹಲಿ, ಮುಂಬಯಿ, ಚೆನ್ನೈ ಹಾಗೂ ಕೋಲ್ಕತಾಗಳ ಮಹಾನಗರಪಾಲಿಕೆಗಳಲ್ಲಿ ಮಹಿಳಾ ಮೀಸಲಾತಿಯ ಜಾರಿ ಹಾಗೂ ಪರಿಣಾಮಗಳು' ಎಂಬ ಬಗ್ಗೆ ಸಮಾಜ ವಿಜ್ಞಾನಗಳ ಸಂಸ್ಥೆ ಇನ್ನೊಂದು ಅಧ್ಯಯನ ಮಾಡಿದೆ.

**ಸರಕಾರೇತರ ಸಂಘಟನೆಗಳ ಪಾತ್ರ:** ಸಂವಿಧಾನದ 74ನೆಯ ತಿದ್ದುಪಡಿಯ ಒತ್ತು, ನಗರಪಾಲಿಕೆಗಳ ಚುನಾಯಿತ ಮಹಿಳಾ ಸದಸ್ಯರ ಸಾಮರ್ಥ್ಯವನ್ನು ಬೆಳೆಸುವಲ್ಲಿ ಹಲವು ಸರಕಾರೇತರ ಸಂಘಟನೆಗಳ ಕ್ರಿಯೆಗಳಿಗೆ ಮಹತ್ವ ಬರುವಂತೆ ಮಾಡಿತು. ಸಿಂಗಮ್ಮ ಶ್ರೀನಿವಾಸನ್ ಸಂಘಟನೆಯ ಜೊತೆಗೂಡಿ ಯುನಿಫೆಮ್ ಸಂಘಟನೆ ಎರಡು ನಗರಪಾಲಿಕೆಗಳಲ್ಲಿ ಹಾಗೂ ಎರಡು ಗ್ರಾಮ ಪಂಚಾಯತಿಗಳಲ್ಲಿ ಲಿಂಗ ಸಮಾನತೆಯನ್ನು ಆಧರಿಸಿದ ಮುಂಗಡ ಪತ್ರಗಳನ್ನು ತಯಾರಿಸುವಲ್ಲಿ ತೊಡಗಿದೆ. ಕೆಳ ಮಟ್ಟದಿಂದ ಮೇಲ್ಮಟ್ಟದ ವರೆಗೆ ಹೋಗುವ ಜನತಾಂತ್ರಿಕ ಸೂಕ್ಷ್ಮ ಯೋಜನಾ ಪ್ರಕ್ರಿಯೆಯ ಮೂಲಕ ಮುಂಗಡ ಪತ್ರಗಳನ್ನು ತಯಾರಿಸುವಲ್ಲಿ ಪ್ರಭಾವ ಬೀರಲು ಪ್ರಯತ್ನಿಸುತ್ತಿದೆ. ಕರ್ನಾಟಕದ 20 ಜಿಲ್ಲೆಗಳಲ್ಲಿ ಮಹಿಳಾ ಸದಸ್ಯರಿಗೆ ನಗರಪಾಲಿಕೆಗಳ ಆಡಳಿತ ಕೌಶಲ್ಯದಲ್ಲಿ ತರಬೇತಿ ನೀಡುವ ಕೆಲಸವನ್ನು ಯುನಿಫೆಮ್ ಸಂಘಟನೆ ವಿಮೆನ್ಸ ಪೊಲಿಟಿಕಲ್ ವಾಚ್ ಎಂಬ ಸಂಘಟನೆಯ ಜೊತೆಗೂಡಿ ಮಾಡುತ್ತಿದೆ. ಅದು ತರಬೇತಿಯ ವಿಧಾನಗಳನ್ನು ರೂಪಿಸುವಲ್ಲಿ, ಮಾಹಿತಿಯನ್ನು ಸಂಗ್ರಹಿಸುವಲ್ಲಿ, ಮಹಿಳಾ ಸದಸ್ಯರ ಮೈತ್ರಿಕೂಟಗಳನ್ನು ಹಾಗೂ ಜಾಲಗಳನ್ನು ರಚಿಸುವಲ್ಲಿ ಹಾಗೂ ತರಬೇತಿ ನೀಡುವವರ ಜಾಲವನ್ನು ರಚಿಸುವಲ್ಲಿ ಕೂಡ ಕಾರ್ಯನಿರತವಾಗಿದೆ. ನಗರ ಸಂಶೋಧನಾ ಕೇಂದ್ರ, ವಾರ್ಡಗಳ ನಿರ್ವಹಣೆ ಮಾಡುವ ವಿಧಾನಗಳನ್ನು ರೂಪಿಸುವಲ್ಲಿ, ನಗರಪಾಲಿಕೆಗಳು ಹಾಗೂ ನಾಗರಿಕರ ನಡುವಣ ಸಂಬಂಧಗಳನ್ನು ಉತ್ತಮಗೊಳಿಸುವಲ್ಲಿ ಮಂಗಳೂರು ಮಹಾನಗರಪಾಲಿಕೆ ಹಾಗೂ ಉಡುಪಿ ನಗರಸಭೆಗಳ ಚುನಾಯಿತ ಸದಸ್ಯರ ಜೊತೆಗೂಡಿ ಕೆಲಸ ಮಾಡುತ್ತಿದೆ. ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡು ಒಬ್ಬರಿಂದೊಬ್ಬರು ಕಲಿತುಕೊಳ್ಳುವಂತೆ ನಗರ ಸಂಶೋಧನಾ ಕೇಂದ್ರ ಮಹಿಳಾ ಸದಸ್ಯರನ್ನು ಒಂದೆಡೆ ತರುವಲ್ಲಿ ಸಹಾಯಕವಾಗಿದೆ.

## 3. ಪ್ರಸ್ತುತ ಅಧ್ಯಯನ

**ಪ್ರಸ್ತುತ ಅಧ್ಯಯನದ ಆವಶ್ಯಕತೆ:** ಕರ್ನಾಟಕದ ಕರಾವಳಿ ಪ್ರದೇಶದಲ್ಲಿ 2001 ರಿಂದ ನಗರ ಸಂಶೋಧನಾ ಸಂಸ್ಥೆ ನಗರಪಾಲಿಕೆಗಳ ಮಹಿಳಾ ಸದಸ್ಯರೊಂದಿಗೆ ಕೆಲಸ ಮಾಡುತ್ತಲೇ ಇದೆ. 2003ರಲ್ಲಿ ಅದು ಸುಮಾರು 35 ಮಹಿಳಾ ಸದಸ್ಯರ ಒಂದು ಸಭೆಯನ್ನು ಏರ್ಪಡಿಸಿತ್ತು. 2004 ರಲ್ಲಿ ಸುಮಾರು 45 ಮಹಿಳಾ ಸದಸ್ಯರ ಇನ್ನೊಂದು ರಾಜ್ಯ ಮಟ್ಟದ ಸಭೆಯನ್ನು ಏರ್ಪಡಿಸಿತ್ತು. ಅವರೊಂದಿಗೆ ಕೆಲಸ ಮಾಡಿದ ನಮ್ಮ ಅನುಭವ, ಮಂಗಳೂರು ಮತ್ತು ಉಡುಪಿಗಳಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸಿದಾಗಿನ ನಮ್ಮ ಅನುಭವಗಳು ಹಾಗೂ ಒಂದೇ ವೇದಿಕೆಯ ಮೇಲೆ ಮಹಿಳಾ ಸದಸ್ಯರನ್ನು ಮೊದಲು ಪ್ರಾದೇಶಿಕ ಮಟ್ಟದಲ್ಲಿ ಹಾಗೂ ನಂತರ ರಾಜ್ಯ ಮಟ್ಟದಲ್ಲಿ ಒಟ್ಟಿಗೆ ಸೇರಿಸುವಲ್ಲಿ ನಮಗೆ ಆದ ಅನುಭವಗಳು, ಮಹಿಳಾ ಸದಸ್ಯರ ಆವಶ್ಯಕತೆಗಳ ಬಗ್ಗೆ ಹಾಗೂ ಅವರು ನಗರಪಾಲಿಕೆಗಳಲ್ಲಿ ಜನರ ಪ್ರತಿನಿಧಿಗಳಾಗಿ ಕೆಲಸ ಮಾಡುವಾಗ ರಾಜಕೀಯ ಪಕ್ಷಗಳು ವಹಿಸಬೇಕಾದ ಪಾತ್ರದ ಬಗ್ಗೆ ನಮ್ಮ ಗಮನವನ್ನು ಸೆಳೆದವು.

**ರಾಜಕೀಯ ಪಕ್ಷಗಳಲ್ಲಿ ನೀತಿಯ ಕೊರತೆ:** ಕರ್ನಾಟಕದಲ್ಲಿ ವಿಕೇಂದ್ರೀಕರಣದ ಪ್ರಕ್ರಿಯೆಯನ್ನು ಸಾಕಾರಗೊಳಿಸುವಲ್ಲಿ ನಗರಪಾಲಿಕೆಗಳ ಜನ ಪ್ರತಿನಿಧಿಗಳ ಬಗ್ಗೆ ರಾಜಕೀಯ ಪಕ್ಷಗಳ ನಿಲುವೇನಿರಬಹುದು ಎಂಬ ಬಗ್ಗೆ ತಿಳಿದುಕೊಳ್ಳಲು ನಗರ ಸಂಶೋಧನಾ ಕೇಂದ್ರ ಹಲವಾರು ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಭೇಟಿ ಮಾಡಿತು. ಆದರೆ ಈ ಸಮಸ್ಯೆಯನ್ನು ಎದುರಿಸುವುದು ಪಕ್ಷಗಳ ಪ್ರತಿನಿಧಿಗಳಿಗೆ ಸಾಧ್ಯವಾಗಲಿಲ್ಲ ಎನ್ನುವುದೊಂದು ಆಶ್ಚರ್ಯದ ಸಂಗತಿ. ಏಕೆಂದರೆ ಅವರ ಪಕ್ಷಗಳಲ್ಲಿ ನಗರಪಾಲಿಕೆಗಳ ಚುನಾಯಿತ ಸದಸ್ಯರ ಬಗ್ಗೆ ಒಂದು ನೀತಿ ಎನ್ನುವುದಿರಲಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಕೂಡ ಸಂದರ್ಶಿತರಲ್ಲಿ 40 ಜನ ತಮ್ಮ ಪಕ್ಷಗಳಲ್ಲಿ ನಗರಪಾಲಿಕೆಗಳ ಮಹಿಳಾ ಸದಸ್ಯರಿಗಾಗಿ ಒಂದು ನೀತಿ ಎನ್ನುವುದಿಲ್ಲ ಎಂದು ಹೇಳಿದರು. ಈ ಪಕ್ಷಗಳಿಗೆ ಜನತಂತ್ರದ ವಿಕೇಂದ್ರೀಕರಣದ ಬಗ್ಗೆಯೇ ಆಗಲಿ ನಗರಪಾಲಿಕೆಗಳ ಮಹಿಳಾ ಸದಸ್ಯರ ಸಬಲೀಕರಣದ ಬಗ್ಗೆಯೇ ಆಗಲಿ ಕಾಳಜಿಯೇ ಇರಲಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಯಿತು. ಆದರೆ ಇಂಥ ಪರಿಸ್ಥಿತಿಯಲ್ಲಿದ್ದ ಒಂದು ಆಶಾಕಿರಣವೆಂದರೆ ನಗರಪಾಲಿಕೆಗಳ ಹಲವು ನುರಿತ ಹಾಗೂ ಹಿರಿಯ ಸದಸ್ಯರು ಈ ಎರಡೂ ಸಮಸ್ಯೆಗಳ ಬಗೆಗಿನ ನೀತಿಯ ವಿಶಾಲವಾದ ಅಂಶಗಳನ್ನು ಅರ್ಥಮಾಡಿಕೊಂಡಿದ್ದರು ಎನ್ನುವುದು.

**ಎದುರಾಗುತ್ತಿರುವ ಪ್ರಶ್ನೆಗಳು:** ಮೇಲೆ ಹೇಳಿದ ಸಂದರ್ಭದಲ್ಲಿ ಕೆಳಕಂಡ ಪ್ರಶ್ನೆಗಳು ಎದುರಾಗುತ್ತವೆ.

- ನಗರಪಾಲಿಕೆಗಳ ಮಹಿಳಾ ಸದಸ್ಯರು ತಮ್ಮ ಚುನಾಯಿತ ಪ್ರತಿನಿಧಿಯ ಪಾತ್ರವನ್ನು ಯಾವ ದೃಷ್ಟಿಯಿಂದ ನೋಡುತ್ತಾರೆ?
- ಜನತಾಂತ್ರಿಕ ವಿಕೇಂದ್ರೀಕರಣದ ವಿಷಯವನ್ನು ಹಾಗೂ ವಿಶೇಷವಾಗಿ ಸಂವಿಧಾನದ 74ನೆಯ ತಿದ್ದುಪಡಿಯನ್ನು ಅವರು ಹೇಗೆ ಪರಿಗಣಿಸುತ್ತಾರೆ?
- ನಗರಪಾಲಿಕೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವಾಗ ಮಹಿಳಾ ಸದಸ್ಯರು ಎದುರಿಸುವ ಸಮಸ್ಯೆಗಳು ಯಾವುವು?
- ಮಹಿಳಾ ಸದಸ್ಯರು ತಮ್ಮ ಪಾತ್ರವನ್ನು ನಿರ್ವಹಿಸುವಂತೆ ಅವರನ್ನು ಪ್ರೇರೇಪಿಸುತ್ತಿರುವ ಶಕ್ತಿಗಳಾವವು?
- ನಗರಪಾಲಿಕೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳಾ ಸದಸ್ಯರೂ ಪಾಲ್ಗೊಳ್ಳುವಂತೆ ನಗರಪಾಲಿಕೆ ಹೇಗೆ ಸಹಾಯ ಮಾಡುತ್ತದೆ?
- ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ರಾಜಕೀಯ ಪಕ್ಷಗಳು ಹೇಗೆ ಪರಿಗಣಿಸುತ್ತವೆ?

- ರಾಜಕೀಯ ಪಕ್ಷಗಳಲ್ಲಿ ನಗರಪಾಲಿಕೆಗಳ ಮಹಿಳಾ ಸದಸ್ಯರು ಎದುರಿಸುವ ಸಮಸ್ಯೆಗಳಾವವು?
- ನಗರಪಾಲಿಕೆಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳಾ ಸದಸ್ಯರೂ ಪಾಲ್ಗೊಳ್ಳುವಂತೆ ರಾಜಕೀಯ ಪಕ್ಷಗಳು ಹೇಗೆ ಸಹಾಯ ಮಾಡುತ್ತವೆ?
- ನಗರಾಡಳಿತದಲ್ಲಿ ನಗರಪಾಲಿಕೆಗಳ ಮಹಿಳಾ ಸದಸ್ಯರು ಭಾಗವಹಿಸುವಂತೆ ಮಾಡಲು ರಾಜ್ಯ ಸರಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಈ ಪ್ರಶ್ನೆಗಳ ನಿಜವಾದ ಅರ್ಥವನ್ನು ಗ್ರಹಿಸುವ ಪ್ರಯತ್ನ ಅತ್ಯಾವಶ್ಯಕ. ಹಾಗೆಯೇ ಹಸ್ತಕ್ಷೇಪ ಮಾಡಲು ಪ್ರವೇಶ ಬಿಂದುಗಳನ್ನು ಕಂಡುಕೊಳ್ಳಲು ಒಳನೋಟ ದೊರಕುವಂತೆ ಕ್ರಿಯಾತ್ಮಕ ಸಂಶೋಧನೆಯ ಆವಶ್ಯಕತೆಯೂ ಇದೆ.

## ಪ್ರಸ್ತುತ ಅಧ್ಯಯನದ ಉದ್ದೇಶಗಳು:

- ನಗರಪಾಲಿಕೆಗಳಲ್ಲಿ ಹಾಗೂ ರಾಜಕೀಯ ಪಕ್ಷಗಳಲ್ಲಿ ನಗರಪಾಲಿಕೆಗಳ ಮಹಿಳಾ ಸದಸ್ಯರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.
- ನಗರ ಪ್ರದೇಶಗಳಲ್ಲಿ ನೀತಿಗಳನ್ನು ನಿರ್ಧರಿಸುವಾಗ ನಗರಪಾಲಿಕೆಗಳ ಮಹಿಳಾ ಸದಸ್ಯರ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪರೀಕ್ಷಿಸುವುದು.
- ರಾಜಕೀಯ ಪಕ್ಷಗಳಲ್ಲಿ ಹಾಗೂ ಸರಕಾರದಲ್ಲಿ ಮಹಿಳೆಯರಿಗೆ ಇರುವ ಸಮಸ್ಯೆಗಳನ್ನು ಹಾಗೂ ಸಹಾಯಕ ಕಾರ್ಯಕ್ರಮಗಳನ್ನು ಅರ್ಥ ಮಾಡಿಕೊಳ್ಳುವುದು.

## ಈ ಅಧ್ಯಯನದಿಂದ ತಲುಪಬಹುದಾದ ಪರಿಣಾಮಗಳು

ಅತ್ಯಂತ ಕೆಳಮಟ್ಟದ ಚುನಾಯಿತ ಪ್ರತಿನಿಧಿಗಳಿಗೆ, ವಿಶೇಷವಾಗಿ ಮಹಿಳಾ ಪ್ರತಿನಿಧಿಗಳಿಗೆ, ಅಧಿಕಾರದ ಹಸ್ತಾಂತರವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಹಾಗು ಆ ಮೂಲಕ ಜನತಂತ್ರವನ್ನೂ ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡುವುದು ಈ ಅಧ್ಯಯನದಿಂದ ಸಾಧ್ಯವಾಗಬಹುದು. ಈ ಅಧ್ಯಯನದಿಂದ ಕೆಳಕಾಣಿಸಿದ ಪರಿಣಾಮಗಳು ಸಾಧ್ಯವಾಗಬಹುದು:

- ನಗರ ಪ್ರದೇಶಗಳಲ್ಲಿ ನಗರಪಾಲಿಕೆಗಳ ಚುನಾಯಿತ ಮಹಿಳಾ ಸದಸ್ಯರಿಗಿರುವ ಸಮಸ್ಯೆಗಳ ವಿಶ್ಲೇಷಣಾತ್ಮಕ ಅಧ್ಯಯನ ಮಾಡುವುದು.
- ರಾಜಕೀಯ ಪಕ್ಷಗಳಲ್ಲಿ ಹಾಗೂ ಸರಕಾರಗಳಲ್ಲಿ ನಗರಪಾಲಿಕೆಗಳ ಚುನಾಯಿತ ಮಹಿಳಾ ಸದಸ್ಯರಿಗೆ ಸಹಾಯಕವಾಗಬಹುದಾದ ಮಾರ್ಗೋಪಾಯಗಳನ್ನು ಗುರುತಿಸುವುದು.
- ರಾಜಕೀಯ ಪಕ್ಷಗಳಲ್ಲಿ ಹಾಗೂ ಸರಕಾರಗಳಲ್ಲಿ ನಗರಪಾಲಿಕೆಗಳ ಚುನಾಯಿತ ಮಹಿಳಾ ಸದಸ್ಯರಿಗೆ ಸಹಾಯಕವಾಗಬಹುದಾದ ಕ್ರಮಗಳ ಆವಶ್ಯಕತೆಯನ್ನು ಅಳೆಯುವುದು.
- ನಗರಪ್ರದೇಶಗಳ ಆಡಳಿತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಹಸ್ತಕ್ಷೇಪ ಮಾಡುವ ಚೌಕಟ್ಟನ್ನು ಸಿದ್ಧಪಡಿಸುವುದು.

## 4. ಅಧ್ಯಯನದ ವಿಧಾನ

**ನಗರಪಾಲಿಕೆಗಳ ಆಯ್ಕೆ:** ಪ್ರಾರಂಭದಲ್ಲಿ ಕರ್ನಾಟಕದ ಹತ್ತು ನಗರಪಾಲಿಕೆಗಳ ಬಗ್ಗೆ ಅಧ್ಯಯನ ಮಾಡಲು ಯೋಚಿಸಲಾಗಿತ್ತು. ಆದರೆ ಅಧ್ಯಯನ ಮಾಡಲು ಉದ್ದೇಶಿಸಿದ ನಗರಗಳ ಜೊತೆಗೆ ನಗರ ಸಂಶೋಧನಾ ಕೇಂದ್ರಕ್ಕೆ ಹಾಗೂ ಸಹಯೋಗೀ ಸಂಸ್ಥೆಗಳಿಗೆ ಇದ್ದ ಪರಿಚಯವನ್ನು, ಈ ಮೊದಲು ಆ ನಗರಗಳಲ್ಲಿ ಈ ಸಂಸ್ಥೆಗಳು ಮಾಡಿದ ಕೆಲಸಗಳನ್ನು ಹಾಗೂ ಈ ನಗರಪಾಲಿಕೆಗಳ ಚುನಾಯಿತ ಸದಸ್ಯರೊಂದಿಗೆ ಈ ಸಂಸ್ಥೆಗಳಿಗೆ ಇದ್ದ ಸ್ಪಂದನವನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ನಗರಾಡಳಿತ ಸಂಸ್ಥೆಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಲಾಯಿತು.

ಕೊಡಗು ಜಿಲ್ಲೆಯ
ಮಡಕೇರಿ ನಗರಸಭೆ.

ಉಡುಪಿ ಜಿಲ್ಲೆಯ
ಉಡುಪಿ ನಗರಸಭೆ.

ತುಮಕೂರು ಜಿಲ್ಲೆಯ
ತುಮಕೂರು ನಗರಸಭೆ.

ದಕ್ಷಿಣ ಕನ್ನಡ ಜಿಲ್ಲೆಯ
ಮಂಗಳೂರು ಮಹಾನಗರಪಾಲಿಕೆ.

ಧಾರವಾಡ ಜಿಲ್ಲೆಯ
ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ.

**ಸಂದರ್ಶಿತರ ಆಯ್ಕೆ:** ಈ ಕೆಳಕಂಡಂತೆ ಸಂದರ್ಶಿತರನ್ನು ಗುರುತಿಸಲಾಯಿತು ಹಾಗೂ ನಮ್ಮ ಸಹಯೋಗೀ ಸಂಸ್ಥೆಗಳು ಅವರೊಂದಿಗೆ ಸಂದರ್ಶನ ನಡೆಸಿದವು.

**ಸಹಯೋಗೀ ಸಂಸ್ಥೆಗಳ ಆಯ್ಕೆ:** ಅಧ್ಯಯನ ನಡೆಸಲು ಉದ್ದೇಶಿಸಲಾದ ನಗರಗಳೊಂದಿಗೆ ಸಹಯೋಗೀ ಸಂಸ್ಥೆಗಳಿಗೆ ಇದ್ದ ಪರಿಚಯ ಹಾಗೂ ಆ ನಗರಗಳಲ್ಲಿ ಆ ಸಂಸ್ಥೆಗಳು ಮಾಡಿದ ಕೆಲಸವನ್ನು ಆಧರಿಸಿ ಸಹಯೋಗೀ ಸಂಸ್ಥೆಗಳನ್ನು ಆಯ್ಕೆ ಮಾಡಲಾಯಿತು.

**ಅಧ್ಯಯನಕ್ಕೆ ಬೇಕಾದ ಮಾಹಿತಿಯ ಸಂಗ್ರಹಣೆ:** ಈ ಅಧ್ಯಯನಕ್ಕಾಗಿ ಸಿದ್ಧಪಡಿಸಲಾದ ಪ್ರಶ್ನಾವಳಿಯ ಆಧಾರದ ಮೇಲೆ, **ನಗರಪಾಲಿಕೆ**ಗಳ ಪುರುಷ ಹಾಗೂ ಮಹಿಳಾ ಸದಸ್ಯರೊಂದಿಗೆ, ರಾಜಕೀಯ ಮುಖಂಡರೊಂದಿಗೆ ಹಾಗೂ **ನಗರಪಾಲಿಕೆ**ಗಳ ಅಧಿಕಾರಿಗಳೊಂದಿಗೆ ನಡೆಸಿದ ವಿವರವಾದ ಸಂವಾದಗಳು ಹಾಗೂ ಸಂದರ್ಶನಗಳು ಈ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಒದಗಿಸಿದವು. ವಿವಿಧ ಸ್ತರಗಳಲ್ಲಿ ಅವರೊಂದಿಗೆ ನಡೆಸಲಾದ ಚರ್ಚೆಗಳಲ್ಲಿ ಈ ಮಾಹಿತಿಯ ವಸ್ತುನಿಷ್ಠತೆಯನ್ನು ಪರೀಕ್ಷಿಸಲಾಯಿತು. ಅಧ್ಯಯನ ತಂಡ ಜೂನ್ 2005ರಲ್ಲಿ ಅಧ್ಯಯನ ನಡೆಸಲಾದ ನಗರಗಳಲ್ಲಿ ವಾಸವಾಗಿದ್ದ ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತುಗಳ ಸದಸ್ಯರೊಂದಿಗೆ ಸಂದರ್ಶನ ನಡೆಸಿತು.

ಸಹಯೋಗೀ ಸರಕಾರೇತರ ಸಂಘಟನೆಗಳು, ನಗರಾಡಳಿತ ಸಂಸ್ಥೆಗಳ ಪುರುಷ ಹಾಗೂ ಮಹಿಳಾ ಸದಸ್ಯರು ಹಾಗೂ ಇತರೆ ಸರಕಾರೇತರ ಸಂಘಟನೆಗಳೊಂದಿಗೆ ಒಂದು ಸಭೆಯನ್ನು 2005ರ ಎಪ್ರಿಲ್ ತಿಂಗಳ 2ನೇ ವಾರದಲ್ಲಿ ಮಂಗಳೂರಿನಲ್ಲಿ ಆಯೋಜಿಸಲಾಯಿತು. ಈ ಸಭೆಯ ಉದ್ದೇಶ ಈ ಅಧ್ಯಯನಕ್ಕಾಗಿ ಹಾಗೂ ವಿಶೇಷವಾಗಿ ಪ್ರಶ್ನಾವಳಿಯ ಬಗ್ಗೆ ಮಾಹಿತಿ ಸಂಗ್ರಹಿಸುವುದಾಗಿತ್ತು. ಪ್ರಶ್ನಾವಳಿಗೆ ಹಾಗೂ ಅಧ್ಯಯನದ ವಿಧಾನಕ್ಕೆ ಅಂತಿಮ ರೂಪ ಕೊಡಲು 2005ರ ಎಪ್ರಿಲ್ ತಿಂಗಳ 3ನೇ ವಾರದಲ್ಲಿ ಮತ್ತೇ ಮಂಗಳೂರಿನಲ್ಲಿ ಒಂದು ಸಭೆ ನಡೆಸಲಾಯಿತು. 2005ರ ಜೂನ್ ತಿಂಗಳ 2ನೇ ವಾರದಲ್ಲಿ ಹುಬ್ಬಳ್ಳಿಯಲ್ಲಿ ಕ್ಷೇತ್ರ ಅಧ್ಯಯನದ ಪ್ರಗತಿಯ ಮಧ್ಯಾವದಿ ಪರಿಶೀಲನೆಗಾಗಿ ಒಂದು ಸಭೆಯನ್ನು ನಡೆಸಲಾಯಿತು. 2005ರ ಜೂನ್ ತಿಂಗಳಲ್ಲಿ

ಈ ಅಧ್ಯಯನವನ್ನು ನಡೆಸಲಾದ ಎಲ್ಲಾ ನಗರಗಳಲ್ಲಿ ನಗರಪಾಲಿಕೆಗಳ ಪುರುಷ ಹಾಗೂ ಮಹಿಳಾ ಸದಸ್ಯರೊಂದಿಗೆ ಸಭೆಗಳನ್ನು ನಡೆಸಲಾಯಿತು. 2005ರ

ಜುಲೈ ಹಾಗೂ ಅಗಸ್ಟ ತಿಂಗಳುಗಳಲ್ಲಿ ಮಡಕೇರಿ ಹಾಗೂ ಉಡುಪಿ ನಗರಸಭೆಗಳ ಹಾಗೂ ಮಂಗಳೂರು ಮತ್ತು ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಗಳ ಆಯ್ದ ಪುರುಷ ಹಾಗೂ ಮಹಿಳಾ ಸದಸ್ಯರಿಗಾಗಿ ಒಂದು ತರಬೇತಿ ಶಿಬಿರವನ್ನು ನಡೆಸಲಾಯಿತು.

**ಅಧ್ಯಯನದ ಕಾಲಮಿತಿ:** ಈ ಅಧ್ಯಯನವನ್ನು ಪೂರ್ಣಗೊಳಿಸಲು ಆರು ತಿಂಗಳುಗಳ ಸಮಯ ಬೇಕಾಯಿತು. ಅಧ್ಯಯನವನ್ನು 2005ರ ಎಪ್ರಿಲ್ ಹಾಗೂ ಸಪ್ಟಂಬರ್ ತಿಂಗಳುಗಳ ನಡುವೆ ನಡೆಸಲಾಯಿತು.

**ನಗರಪಾಲಿಕೆಗಳಲ್ಲಿ ಮಹಿಳೆಯರು – ಈ ಅಧ್ಯಯನದಲ್ಲಿ ಸಂದರ್ಶಿತರು**

| | ಮಹಿಳಾ ಸದಸ್ಯರು | ಪುರುಷ ಸದಸ್ಯರು | ಪಕ್ಷದ ಸದಸ್ಯರು | ನಗರಪಾಲಿಕೆಗಳ ಅಧಿಕಾರಿಗಳು | ಒಟ್ಟು |
|---|---|---|---|---|---|
| ಆ0ಯೋಜಿತ | 44 | 28 | 40 | 15 | 127 |
| ಆ0ಯೋಜಿತ % | 35 | 22 | 31 | 12 | 100 |
| ಸ0ದರ್ಶಿತ | 49 | 21 | 30 | 22 | 122 |

## 5. ಹೊರಮೂಡಿದ ಸಂಗತಿಗಳು

**ಈ ಅಧ್ಯಯನದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ಈ ಕೆಳಕಂಡ ವಿಭಾಗಗಳಲ್ಲಿ ವಿಂಗಡಿಸಿ ಪ್ರಸ್ತುತಪಡಿಸಲಾಗಿದೆ:**

- ಸಂದರ್ಶಿತರ ಪಾರ್ಶ್ವನೋಟ.
- ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರ ಪ್ರವೇಶ
- ಮಹಿಳಾ ಸದಸ್ಯರು: ಬೆಂಬಲಗಳು ಹಾಗೂ ಅಡೆತಡೆಗಳು.
- ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರು: ನಿರೀಕ್ಷೆಗಳು
- ನಗರಪಾಲಿಕೆಗಳಲ್ಲಿ ಮಹಿಳೆಯರು: ಪಾತ್ರದ ಸ್ಪಷ್ಟತೆ.
- ನಗರಪಾಲಿಕೆಗಳಲ್ಲಿ ಮಹಿಳೆಯರು: ಪರಿಷತ್ ಸಭೆಗಳು
- ನಗರಪಾಲಿಕೆಗಳಲ್ಲಿ ಮಹಿಳೆಯರು: ಪಕ್ಷದ ಮಿತಿಗಳು.
- ನಗರಪಾಲಿಕೆಗಳಲ್ಲಿ ಮಹಿಳೆಯರು: ರಾಜ್ಯ ಸರಕಾರ ಹಾಗೂ ಅಧಿಕಾರಿ ವರ್ಗ.
- ನಗರಪಾಲಿಕೆಗಳಲ್ಲಿ ಮಹಿಳೆಯರು: ಕಾರ್ಯದಕ್ಷತೆಯ ನಿರೀಕ್ಷೆಗಳು.

### ಸಂದರ್ಶಿತರ ಪಾರ್ಶ್ವನೋಟ

ಪ್ರಸ್ತುತ ಅಧ್ಯಯನದಲ್ಲಿ ಒಟ್ಟಿನಲ್ಲಿ ನಗರಪಾಲಿಕೆಗಳ 49 ಮಹಿಳಾ ಸದಸ್ಯರನ್ನು ಸಂದರ್ಶಿಸಲಾಯಿತು. ಇವರಲ್ಲಿ ಆರು ಜನರು 20–30ರ ವಯಸ್ಸಿನವ ರಾಗಿದ್ದರು. 31 ಮಹಿಳೆಯರು 30–50ರ ವಯಸ್ಸಿನವರಾಗಿದ್ದರು. 39 ಮಹಿಳೆಯರು ವಿವಾಹಿತ ರಾಗಿದ್ದರು. 3 ಮಹಿಳೆಯರು ವಿಧವೆಯರಾಗಿದ್ದರು. ಒಬ್ಬ ಮಹಿಳೆ ಮಾತ್ರ ತನ್ನ ಗಂಡನಿಂದ ಪ್ರತ್ಯೇಕವಾಗಿದ್ದರು. 36 ಮಹಿಳೆಯರು ಮೊದಲ ಬಾರಿಗೆ ಚುನಾಯಿತರಾಗಿದ್ದರು. 11 ಮಹಿಳೆಯರು ಎರಡನೆಯ ಬಾರಿ ಹಾಗೂ ಒಬ್ಬ ಮಹಿಳೆ ಮಾತ್ರ ಮೂರಕ್ಕಿಂತ ಹೆಚ್ಚು ಬಾರಿ ಚುನಾಯಿತರಾಗಿದ್ದರು. ಚುನಾಯಿತರಲ್ಲಿ ಯಾರೂ ಅಶಿಕ್ಷಿತರಾಗಿರಲಿಲ್ಲ. 17 ಮಹಿಳೆಯರು ಮಾಧ್ಯಮಿಕ ಶಾಲೆಗಳಲ್ಲಿ ಓದಿದ್ದರು, 14 ಮಹಿಳೆಯರು ಪದವೀಧರರಾಗಿದ್ದರು ಹಾಗೂ ಇಬ್ಬರು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು. ಆದರೆ ವಿದ್ಯಾವಂತರಾಗಿದ್ದರೂ ಕೂಡ ಬರಿ ಇಬ್ಬರು ಮಹಿಳೆಯರು ಮಾತ್ರ ಉದ್ಯೋಗಗಳಲ್ಲಿ ನಿರತ ರಾಗಿದ್ದರು. ಮಿಕ್ಕವರು ಯಾವ ಉದ್ಯೋಗಗಳಲ್ಲೂ ನಿರತರಾಗಿರಲಿಲ್ಲ. ಬರಿ 8 ಮಹಿಳೆಯರು ಮಾತ್ರ ತಾವು ವಾಣಿಜ್ಯ ವ್ಯವಹಾರದಲ್ಲಿ ತೊಡಗಿರುವುದಾಗಿ ಹೇಳಿ ದರು ಹಾಗೂ ಉಳಿದವರು ಯಾವ ವ್ಯವಹಾರದಲ್ಲೂ ತೊಡಗಿರಲಿಲ್ಲ. ಆದರೆ ಆಶ್ಚರ್ಯವೆಂದರೆ, 30 ಮಹಿಳೆಯರು ಯಾವುದಾದರೂ ಒಂದು ಸಾಮಾಜಿಕ ಸಂಘಟನೆ ಅಥವಾ ಸೇವಾ ಸಂಸ್ಥೆಯಲ್ಲಿ ತೊಡಗಿ ಕೊಂಡಿದ್ದರು. ಸಂದರ್ಶಿತ ಮಹಿಳೆಯರಲ್ಲಿ 22 ಮಹಿಳೆಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದರು. ಉಳಿದವರಲ್ಲಿ 19 ಮಹಿಳೆಯರು ಭಾರತೀಯ ಜನತಾ ಪಕ್ಷಕ್ಕೂ, 5 ಮಹಿಳೆಯರು ಜಾತ್ಯಾತೀತ ಜನತಾ ದಳಕ್ಕೂ, ಒಬ್ಬರು ಸಂಯುಕ್ತ ಜನತಾ ದಳಕ್ಕೂ ಸೇರಿದವರಾಗಿದ್ದರು. ಒಬ್ಬ ಮಹಿಳೆ ಮಾತ್ರ ಯಾವ ರಾಜಕೀಯ ಪಕ್ಷಕ್ಕೂ ಸೇರಿದವಳಾಗಿರಲಿಲ್ಲ.

### ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಮಹಿಳೆಯರ ಪ್ರವೇಶ

**ಸಂವಿಧಾನದ 74ನೆಯ ತಿದ್ದುಪಡಿ:** ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಮಹಿಳೆಯರು ದೇಶದ

ಆಡಳಿತದಲ್ಲಿ ಭಾಗವಹಿಸುತ್ತಲೇ ಬಂದಿದ್ದಾರೆ. ಹಲವರು ನಗರಪಾಲಿಕೆಗಳಲ್ಲೂ ಪ್ರವೇಶ ಮಾಡಿದ್ದುಂಟು. ಆದರೆ ಅವರ ಪಾಲು ಅತ್ಯಂತ ಕಡಿಮೆಯಾಗಿತ್ತು. ಇಂದು ಮಹಿಳೆಯರು ನಗರಪಾಲಿಕೆಗಳನ್ನು ಪ್ರವೇಶಿಸಲು ಹಲವಾರು ಅಂಶಗಳು ಸಹಾಯ ಮಾಡುತ್ತಿವೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದುದು, 1992ರಲ್ಲಿ ಮಾಡಲಾದ ಸಂವಿಧಾನದ 74ನೆಯ ತಿದ್ದುಪಡಿಯ ಮೂಲಕ ಮಹಿಳೆಯರಿಗೆ ನೀಡಲಾದ ಮೀಸಲಾತಿ. ಈ ತಿದ್ದುಪಡಿಯ ಪ್ರಕಾರ ನಗರಪಾಲಿಕೆಗಳ ಮೂರೂ ಸ್ತರಗಳಲ್ಲಿ ಮಹಿಳೆಯರಿಗೆ ಮೂರರಲ್ಲಿ ಒಂದು ಭಾಗಕ್ಕಿಂತ ಕಡಿಮೆಯಾಗದಂತೆ ಸ್ಥಾನಗಳನ್ನು ಮೀಸಲಿಡಲಾಯಿತು. ಇದರಿಂದಾಗಿ ಇಡೀ ದೇಶದಲ್ಲಿ ವಿವಿಧ ನಗರಪಾಲಿಕೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹಲವಾರು ಪಾಲು ಹೆಚ್ಚಾಗಿದೆ. ನಗರಪಾಲಿಕೆಗಳಲ್ಲಿ ಪ್ರವೇಶಿಸಲು ಹಾಗೂ ಆ ಮೂಲಕ ನಗರಪ್ರದೇಶಗಳ ಆಡಳಿತದಲ್ಲಿ ಭಾಗವಹಿಸಲು ವಿಸ್ತೃತ ಅವಕಾಶವನ್ನು ಮಾಡಿ ಕೊಟ್ಟಿದ್ದಕ್ಕಾಗಿ ಈ ತಿದ್ದುಪಡಿಗೆ ನಗರಪಾಲಿಕೆಗಳ ಮಹಿಳಾ ಪ್ರತಿನಿಧಿಗಳು ತಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಾರೆ.

ಈ ತಿದ್ದುಪಡಿ ಮಹಿಳೆಯರಿಗೆ ಇಷ್ಟೊಂದು ವಿಸ್ತೃತ ಅವಕಾಶಗಳನ್ನು ನೀಡಿದ್ದರೂ ಬಹಳಷ್ಟು ಮಹಿಳೆಯರಿಗೆ ಈ ತಿದ್ದುಪಡಿಯ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ನಗರಪಾಲಿಕೆಗಳ ಸಂದರ್ಶಿತ ಮಹಿಳಾ ಸದಸ್ಯರಲ್ಲಿ 29 ಮಹಿಳೆಯರು ಈ ತಿದ್ದುಪಡಿಯ ಬಗ್ಗೆ ಬರಿ ಕೇಳಿರುವುದಾಗಿ ಹೇಳಿದರು. 20 ಮಹಿಳೆಯರು ಈ ಬಗ್ಗೆ ಏನೂ ಕೇಳೀಯೂ ಇರಲಿಲ್ಲ. ಇದರ ಬಗ್ಗೆ ಕೇಳಿದವರಿಗೆ ಕೂಡ ಇದು ಯಾವ ವಿಷಯದ ಬಗ್ಗೆ ಇದೆ ಎಂಬ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಬರಿ 4 ಮಹಿಳೆಯರು ಈ ವಿಷಯದ ಬಗ್ಗೆ ಒಂದು ಕಾರ್ಯಕ್ರಮಕ್ಕೆ ಹಾಜರಾಗಿದ್ದ ಬಗ್ಗೆ ಹೇಳಿದರು. ಇನ್ನಿತರರು ಯಾವ ಕಾರ್ಯಕ್ರಮಕ್ಕೂ ಹಾಜರಾಗಿರಲಿಲ್ಲ. ಬರಿ 10 ಮಹಿಳೆಯರು ಸಂವಿಧಾನದ 12ನೆಯ ಅನುಬಂಧದಲ್ಲಿ ನಗರಪಾಲಿಕೆಗಳಿಗೆ ವಹಿಸಿಕೊಡಲಾದ ವಿಷಯಗಳ ಬಗ್ಗೆ ತಮಗೆ ಗೊತ್ತಿರುವುದಾಗಿ ಹೇಳಿದರು. ಉಳಿದ 39 ಮಹಿಳೆಯರಿಗೆ ಈ ಅನುಬಂಧದ ಅಸ್ತಿತ್ವದ ಬಗ್ಗೆಯೂ ಗೊತ್ತಿರಲಿಲ್ಲ.

## ಕುಟುಂಬದ ಸಹಾಯ ಹಸ್ತ

ನಗರಪಾಲಿಕೆಗಳಲ್ಲಿ ಮಹಿಳೆಯರು ಪ್ರವೇಶ ಮಾಡುವುದಕ್ಕೆ ಬಹಳಷ್ಟು ಸಂದರ್ಭಗಳಲ್ಲಿ ಅವರ ಪರಿವಾರಗಳು ಅತ್ಯಂತ ಮುಖ್ಯ ಪಾತ್ರ ವಹಿಸುತ್ತವೆ. ನೆರೆಹೊರೆಯಲ್ಲಿ ಆ ಪರಿವಾರದ ಪ್ರಭಾವ ಇದಕ್ಕೆ ಒಂದು ಕಾರಣವಾಗಿತ್ತು. ಆ ಪರಿವಾರದ ಇನ್ನಿತರರು ರಾಜಕೀಯದಲ್ಲಿ ಇದ್ದದ್ದು ಇನ್ನೊಂದು ಕಾರಣವಾಗಿತ್ತು. ಹಲವಾರು ಕಾರಣಗಳಿಂದ ಪರಿವಾರದ ಒಬ್ಬ ಪುರುಷನಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಸಿಕ್ಕದೇ ಇದ್ದಾಗ ಅವನ ಸ್ಥಾನದಲ್ಲಿ ಅವನ ಹೆಂಡತಿ, ಮಗಳು ಅಥವಾ ಸೊಸೆಯನ್ನು ಸ್ಪರ್ಧೆಗೆ ಇಳಿಸಿದ್ದು ಇನ್ನೂ ಒಂದು ಕಾರಣವಾಗಿತ್ತು. 49 ಸಂದರ್ಶಿತ ಮಹಿಳೆಯರಲ್ಲಿ 11 ಮಹಿಳೆಯರು ತಮ್ಮ ಕುಟುಂಬಗಳ ಬೆಂಬಲದಿಂದಾಗಿಯೇ ತಾವು ಚುನಾವಣೆಗಳಲ್ಲಿ ಸ್ಪರ್ಧಿಸುವುದು ಸಾಧ್ಯವಾಯಿತು ಎಂದು ಹೇಳಿದರು.

## ಪ್ರವೇಶಕ್ಕೆ ಇತರೆ ಕಾರಣಗಳು

ಸಂವಿಧಾನದ 74ನೆಯ ತಿದ್ದುಪಡಿ ನೀಡಿದ ಮೀಸಲಾತಿಯನ್ನು ಹಾಗೂ ಪರಿವಾರಗಳನ್ನು ಹೊರತು ಪಡಿಸಿ ನಗರಪಾಲಿಕೆಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ಅನುವು ಮಾಡಿಕೊಡುವ ಇನ್ನಿತರ ಅಂಶಗಳೂ ಇವೆ. ನೆರೆಹೊರೆಯ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಮಹಿಳೆಯರು ತೊಡಗಿಕೊಂಡಿದ್ದು ಕೂಡ ಅವರು ನಗರಪಾಲಿಕೆಗಳನ್ನು ಪ್ರವೇಶಿಸಲು ಅವಕಾಶ ಮಾಡಿ ಕೊಡುತ್ತದೆ. ನಗರಪಾಲಿಕೆಗಳ ಚುನಾವಣೆಯಲ್ಲಿ ತಾವು ಸ್ಪರ್ಧಿಸಲು ಸಾರ್ವಜನಿಕರ ಬೆಂಬಲವೇ ಕಾರಣ

ವಾಗಿತ್ತು ಎಂದು 11 ಮಹಿಳೆಯರು ಹೇಳಿದರು. ಹಲವು ಕಾಲ ಪಕ್ಷದ ಕಾರ್ಯಕರ್ತರಾಗಿ ಕೆಲಸ ಮಾಡುವುದು ಕೂಡ ಹಲವು ಬಾರಿ ಮಹಿಳೆಯರಿಗೆ ಇಂಥ ಅವಕಾಶ ಗಳನ್ನು ಒದಗಿಸಿ ಕೊಡುತ್ತದೆ. ತಾವು ಪಕ್ಷದ ಕಾರ್ಯಕರ್ತರಾಗಿ ಕೆಲಸ ಮಾಡಿದ್ದರಿಂದ ತಮಗೆ ನಗರಪಾಲಿಕೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಸಿಕ್ಕಿತು ಎಂದು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಸಂದರ್ಶಿತ ಮಹಿಳೆಯರು ಅಂದರೆ 16 ಮಹಿಳೆಯರು ಹೇಳಿದರು.

ನಗರಪಾಲಿಕೆಗಳಲ್ಲಿ ಮಹಿಳೆಯರ ಪ್ರವೇಶ

* ಸಂವಿಧಾನದ 74ನೆಯ ತಿದ್ದುಪಡಿ ಕೆಳಗೆ ನೀಡಲಾದ ಮೀಸಲಾತಿ.
* ರಾಜಕೀಯ ಪಕ್ಷಗಳು
* ಕುಟುಂಬದ ಪ್ರತಿಷ್ಠೆ
* ಸಮಾಜ ಕಾರ್ಯ

## ನಗರಪಾಲಿಕೆಗಳ ಮಹಿಳಾ ಸದಸ್ಯರು: ಬೆಂಬಲಗಳು ಮತ್ತು ಅಡೆತಡೆಗಳು

### ಕುಟುಂಬದ ಪಾತ್ರ

ನಗರಪಾಲಿಕೆಗಳ ಪ್ರತಿನಿಧಿಯ ಪಾತ್ರ ತಮಗೆ ಹೊಸದು ಹಾಗೂ ಇದುವರೆಗೆ ತಾವು ವಹಿಸುತ್ತಿದ್ದ, ತಾಯಿ, ಸಹೋದರಿ, ಮಗಳು ಮೊದಲಾದ ಪಾತ್ರಗಳಿಗಿಂತ ಭಿನ್ನವಾದುದು ಎಂದು ನಗರಪಾಲಿಕೆಗಳ ಮಹಿಳಾ ಸದಸ್ಯರು ಹೇಳುತ್ತಾರೆ. ನಗರಪಾಲಿಕೆಗಳ ಸದಸ್ಯರ ಪಾತ್ರ ಜವಾಬ್ದಾರಿಯುತವಾದದ್ದು. ಪರಂಪರಾಗತವಾಗಿ ಮಹಿಳೆಯರು ಕುಟುಂಬಗಳಲ್ಲಿ ನಿರ್ವಹಿಸುತ್ತಿದ್ದ ಪಾತ್ರಗಳ ಜೊತೆಗೆ ಈ ಪಾತ್ರವನ್ನೂ ಅವರು ನಿರ್ವಹಿಸಬೇಕಾಗಿದೆ. ಬೆಳಗಿನ ಜಾವ ಮನೆಗೆಲಸ ಗಳನ್ನು ಮಾಡುವುದರೊಂದಿಗೆ ಅವರ ದಿನಚರಿ ಪ್ರಾರಂಭವಾಗುತ್ತದೆ. ನಂತರ ಅವರು ತಮ್ಮ ಚುನಾವಣಾ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ. ನಂತರ ಪಕ್ಷದ ಕಚೇರಿಗೆ ಭೇಟಿ ನೀಡಿ ಸಂಜೆಯ ಒಳಗೆ ಮನೆಗೆ ಮರಳುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ ಪುರುಷರು ಸಂಜೆ ಬಹಳ ತಡವಾಗಿ ತಮ್ಮ ಮನೆಗಳಿಗೆ ಮರಳುತ್ತಾರೆ.

ನಗರಪಾಲಿಕೆಗಳ ಮಹಿಳಾ ಸದಸ್ಯರು ನಿರ್ವಹಿಸುವ ಪಾತ್ರಗಳು

| ವೈಯಕ್ತಿಕ ಬದುಕಿನಲ್ಲಿ | ಸಾರ್ವಜನಿಕ ಬದುಕಿನಲ್ಲಿ |
|---|---|
| ಮಗಳು | ನಗರಪಾಲಿಕೆಯ ಸದಸ್ಯೆ |
| ಸಹೋದರಿ | ವಾರ್ಡ ಪ್ರತಿನಿಧಿ |
| ಹೆಂಡತಿ | ವಾರ್ಡ ನಾಯಕಿ |
| ತಾಯಿ | ಸಾಮಾಜಿಕ ಕಾರ್ಯಕರ್ತೆ |

ನಗರಪಾಲಿಕೆಗಳ ಮಹಿಳಾ ಸದಸ್ಯರ ಬದುಕಿನಲ್ಲಿ ಕುಟುಂಬಗಳು ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸು ತ್ತವೆ. ಹಲವು ಕುಟುಂಬಗಳು ಸಹಾಯ ಮಾಡಿದರೆ ಇನ್ನೂ ಹಲವು ಕುಟುಂಬಗಳು ನಿರ್ಬಂಧಗಳನ್ನು ವಿಧಿಸು ತ್ತವೆ. ಇನ್ನೂ ಹಲವು ಕುಟುಂಬಗಳಂತೂ ನಿಷೇಧವನ್ನೇ ವಿಧಿಸುತ್ತವೆ. ಸಹಾಯ ಮಾಡುವ ಕುಟುಂಬಗಳು ಮಹಿಳಾ ಪ್ರತಿನಿಧಿಗಳಿಗೆ ನಗರಪಾಲಿಕೆಗಳನ್ನು ಪ್ರವೇಶಿ ಸಲು ನೈತಿಕ ಬೆಂಬಲವನ್ನು ನೀಡುತ್ತವೆ. ಹಲವು ಬಾರಿ ಹಣಕಾಸಿನ ಬೆಂಬಲವನ್ನೂ ನೀಡುತ್ತವೆ. ಚುನಾವಣೆ ಗಳಲ್ಲಿ ಸ್ಪರ್ಧಿಸಲು ತಮ್ಮ ಕುಟುಂಬಗಳು ತಮಗೆ ಹಣಕಾಸಿನ ನೆರವನ್ನೂ ನೀಡಿದವು ಎಂದು ಸಂದರ್ಶಿತ ಮಹಿಳೆಯರಲ್ಲಿ 10 ಮಹಿಳೆಯರು ಹೇಳಿದರು. ಚುನಾವಣೆಗಳು ಮುಗಿದ ನಂತರವೂ ನಗರಪಾಲಿಕೆಗಳ ಸದಸ್ಯರಾಗಿ ಕೆಲಸ ಮಾಡುವಲ್ಲಿಯೂ ಈ ಸಹಾಯ ಮುಂದುವರಿಯಿತು. ಹಲವು ಬಾರಿಯಂತೂ ಮಹಿಳಾ

ಸದಸ್ಯರು ನಗರಪಾಲಿಕೆಗಳ ಕೆಲಸಗಳನ್ನು ಮಾಡುವಲ್ಲಿ ಅನುಕೂಲವಾಗಲಿ ಎಂದು ಅವರು ಮಾಡಬೇಕಿದ್ದ ಮನೆಗೆಲಸಗಳನ್ನು ಕುಟುಂಬದ ಬೇರೆ ಸದಸ್ಯರು ತಾವೇ ಮಾಡಿದ ಉದಾಹರಣೆಗಳೂ ಉಂಟು.

ಮಹಿಳಾ ಸದಸ್ಯರು ತಮ್ಮ ಚುನಾವಣಾ ಕ್ಷೇತ್ರಕ್ಕೆ ಭೇಟಿ ನೀಡುವ ಅಥವಾ ಅಭಿವೃದ್ಧಿಯ ಕೆಲಸಗಳ ಉಸ್ತುವಾರಿಯ ಕೆಲಸಗಳನ್ನು ಹಗಲಲ್ಲೇ ಮಾಡಬೇಕು, ಬೆಳಕು ಹರಿಯುವ ಮೊದಲು ಅಥವಾ ಸಂಜೆಯಾದ ನಂತರ ಮಾಡಬಾರದು ಎಂದು ಹೇಳುವ ಮೂಲಕ, ಈ ಕೆಲಸಗಳನ್ನು ಮಾಡುವಾಗ ಬೇಕಾಗುವ ಅವರ ಚಲನಶೀಲತೆಯನ್ನು, ನಿರ್ಬಂಧ ಹೇರುವ ಕುಟುಂಬಗಳು ಮೊಟಕುಗೊಳಿಸುತ್ತವೆ. ಹಲವು ಮಹಿಳಾ ಸದಸ್ಯರು ತಮ್ಮ ಸಹೋದರ ಮೊದಲಾದ ಪುರುಷ ಸಂಬಂಧಿಗಳ ಸಹಾಯವನ್ನು ಪಡೆದು ಈ ನಿರ್ಬಂಧವನ್ನು ದಾಟಿಹೋಗಲು ಪ್ರಯತ್ನಿಸಿದ್ದಾರೆ.

## ಸಾರ್ವಜನಿಕರ ಪಾತ್ರ

**ಹಲವಾರು ಸಂದರ್ಭಗಳಲ್ಲಿ ಮಹಿಳೆಯರು** ತಮ್ಮ ನೆರೆಹೊರೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆಗಳಲ್ಲಿ ತೊಡಗಿಕೊಂಡಿದ್ದರು. ಇಂಥ ಸಂದರ್ಭಗಳಲ್ಲಿ ಮಹಿಳೆಯರು ನಗರಪಾಲಿಕೆಗಳಲ್ಲಿ ಪ್ರವೇಶ ಪಡೆಯಲು ಸಾರ್ವಜನಿಕರು ತಮ್ಮ ನೈತಿಕ ಬೆಂಬಲವನ್ನು ನೀಡಿದ್ದರು. ಚುನಾವಣೆಗಳ ನಂತರ ಕೂಡ ಅವರು ನೀಡಿದ ಈ ಬೆಂಬಲ ಮಹಿಳೆಯರು ನಗರಪಾಲಿಕೆಗಳ ಸದಸ್ಯರಾಗಿ ತಮ್ಮ ಕರ್ತವ್ಯವನ್ನು ನಿಭಾಯಿಸುವುದರಲ್ಲಿ ಸಹಾಯಕವಾಯಿತು.

# ನಗರಪಾಲಿಕೆಗಳ ಸದಸ್ಯರಾಗಿ ಮಹಿಳೆಯರು: ನಿರೀಕ್ಷೆಗಳು

## ನಿರೀಕ್ಷೆಗಳು ಮತ್ತು ವಾಸ್ತವಿಕತೆ:

ನಗರಪಾಲಿಕೆಗಳ ಮಹಿಳಾ ಸದಸ್ಯರು ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆ ಎಂದರೆ ನಿರೀಕ್ಷೆ ಹಾಗೂ ವಾಸ್ತವಿಕತೆಗಳ ನಡುವೆ ಇರುವ ಅಂತರ. ಮತದಾರರು ಹಾಗೂ ರಾಜಕೀಯ ಪಕ್ಷಗಳು ನಗರಪಾಲಿಕೆಗಳ ಮಹಿಳಾ ಸದಸ್ಯರಿಂದ ಕೆಲವು ಅಪೇಕ್ಷೆಗಳನ್ನು ಇಟ್ಟುಕೊಂಡಿರುತ್ತವೆ. ಹಾಗೆಯೇ ಮಹಿಳಾ ಸದಸ್ಯರು ಮತದಾರರಿಂದ, ರಾಜಕೀಯ ಪಕ್ಷಗಳಿಂದ ಹಾಗೂ ನಗರಪಾಲಿಕೆಗಳ ಅಧಿಕಾರಿಗಳಿಂದ ಹಲವಾರು ಅಪೇಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ. ಆದರೆ ಈ ಹಲವಾರು ಥರದ ಅಪೇಕ್ಷೆಗಳು ಹಾಗೂ ವಾಸ್ತವಿಕತೆಗಳ ನಡುವೆ ಸಾಕಷ್ಟು ಅಂತರವಿರುವುದನ್ನು ಮಹಿಳಾ ಸದಸ್ಯರು ಕಂಡುಕೊಂಡಿದ್ದಾರೆ.

## ಮತದಾರರ ನಿರೀಕ್ಷೆಗಳು

ನಿರ್ಧಾರಗಳನ್ನು ಕೈಗೊಳ್ಳುವ ದಿಕ್ಕಿನಲ್ಲಿ ನಗರಪಾಲಿಕೆಗಳ ಮಹಿಳಾ ಸದಸ್ಯರ ನಿಜವಾದ ಪ್ರಯಾಣ ಪ್ರಾರಂಭವಾಗುವುದು ಚುನಾವಣೆಗಳ ನಂತರ. ಚುನಾವಣೆಗಳ ಸಂದರ್ಭದಲ್ಲಿ ತಾವು ಮತದಾರರಿಗೆ ಹಲವಾರು ಭರವಸೆಗಳನ್ನು ಮಹಿಳಾ ಸ್ಪರ್ಧಿಗಳು ನೀಡುತ್ತಾರೆ. ಹಾಗೂ ಇದರಿಂದಾಗಿ ಮಹಿಳಾ ಸದಸ್ಯರು ತಮ್ಮ ಭರವಸೆಗಳನ್ನು ಈಡೇರಿಸುತ್ತಾರೆ ಎಂಬ ಬಗ್ಗೆ ಮತದಾರರಲ್ಲಿ ಅತ್ಯಂತ ಹೆಚ್ಚಿನ ತೀವ್ರತೆಯ ಅಪೇಕ್ಷೆ ಹುಟ್ಟಿಕೊಳ್ಳುತ್ತದೆ. ಆದರೆ ಚುನಾವಣೆಗಳ ನಂತರ ಮಹಿಳಾ ಸದಸ್ಯರು ತಾವು ಕೊಟ್ಟ ಭರವಸೆಗಳನ್ನು ಈಡೇರಿಸುವುದರಲ್ಲಿ ಅಸಮರ್ಥರಾಗುತ್ತಾರೆ. ಮಹಿಳಾ ಪ್ರತಿನಿಧಿಗಳು "ನಗರದಲ್ಲಿ ಬಹಳಷ್ಟು ಪರಿಸ್ಥಿತಿಗಳನ್ನು ಬದಲಿಸುವ ಕನಸು" ಕಾಣುತ್ತಾರೆ. ಆದರೆ ವಾಸ್ತವಿಕತೆ ಭಿನ್ನವಾಗಿರುತ್ತದೆ ಎಂಬುದನ್ನು ನಂತರ ಮನಗಾಣುತ್ತಾರೆ.

## ರಾಜಕೀಯ ಪಕ್ಷಗಳ ಅಪೇಕ್ಷೆಗಳು

ನಗರಪಾಲಿಕೆಗಳ ಚುನಾಯಿತ ಮಹಿಳಾ ಸದಸ್ಯರು ಪಕ್ಷಕ್ಕೆ ಒಳ್ಳೆಯ ಹೆಸರು ಬರುವಂತೆ ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ನಿಭಾಯಿಸುತ್ತಾರೆ ಹಾಗೂ ವಾರ್ಡಗಳ ಆವಶ್ಯಕತೆಗಳ ಬಗ್ಗೆ ಗಮನ ಕೊಡುತ್ತಾರೆ ಹಾಗೂ ಚುನಾವಣೆಗಳಲ್ಲಿ ಇದರಿಂದ ಪಕ್ಷ ಲಾಭ ಪಡೆಯಬಹುದು ಎಂದು ರಾಜಕೀಯ ಪಕ್ಷಗಳು ಅಪೇಕ್ಷಿಸುತ್ತವೆ. ಮಹಿಳಾ ಸದಸ್ಯರು ಚೆನ್ನಾಗಿ ಕೆಲಸ ಮಾಡದಿದ್ದರೆ ಅದು ರಾಜಕೀಯ ಪಕ್ಷಗಳ ಭವಿಷ್ಯದ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತದೆ.

## ನಗರಪಾಲಿಕೆಗಳಲ್ಲಿ ಮಹಿಳೆಯರು: ಪಾತ್ರದ ಸ್ಪಷ್ಟತೆ

ನಗರಪಾಲಿಕೆಗಳಲ್ಲಿ ಪುರುಷ ಮತ್ತು ಮಹಿಳಾ ಸದಸ್ಯರಿಬ್ಬರೂ ಎರಡೆರಡು ಪಾತ್ರಗಳನ್ನು ನಿರ್ವಹಿಸುತ್ತಾರೆ. ಅವರು ನಗರಪಾಲಿಕೆಗಳ ಸದಸ್ಯರಾಗಿ ತಮ್ಮ ತಮ್ಮ ವಾರ್ಡಗಳ ಮತದಾರರನ್ನು ಪ್ರತಿನಿಧಿಸುತ್ತಾರೆ. ಹಾಗೆಯೇ ಅವರು ತಮ್ಮ ರಾಜಕೀಯ ಪಕ್ಷ ಹಾಗೂ ಅವುಗಳ ಸಿದ್ಧಾಂತಗಳನ್ನೂ ಪ್ರತಿನಿಧಿಸುತ್ತಾರೆ.

## ನಗರಪಾಲಿಕೆಗಳು ಹಾಗೂ ರಾಜಕೀಯ ಪಕ್ಷಗಳಿಂದ ತರಬೇತಿ

ಹೊಸದಾಗಿ ನಗರಪಾಲಿಕೆಗಳಿಗೆ ಚುನಾಯಿತರಾದ ಮಹಿಳೆಯರೂ ಸೇರಿದಂತೆ, ಎಲ್ಲಾ ಸದಸ್ಯರಿಗೆ, ನಗರಪಾಲಿಕೆಗಳ ಸದಸ್ಯರ ಪಾತ್ರದ ಬಗ್ಗೆ ರಾಜಕೀಯ ಪಕ್ಷಗಳು ಹಾಗೂ ನಗರಪಾಲಿಕೆಗಳು ತರಬೇತಿಯನ್ನು ನೀಡುತ್ತವೆ. ಆದರೆ ಈ ಎರಡೂ ತರಬೇತಿಗಳ ಒತ್ತು ಹಾಗೂ ವಿಷಯವಸ್ತುಗಳು ಬೇರೆಬೇರೆಯಾಗಿರುತ್ತವೆ. ನಗರಪಾಲಿಕೆಗಳ ಸದಸ್ಯರ ಅಧಿಕಾರಗಳು ಹಾಗೂ ಜವಾಬ್ದಾರಿಗಳು, ನಗರಪಾಲಿಕೆಯ ಸದಸ್ಯರ ಸಭೆಯ ನೀತಿ ಹಾಗೂ ನಡಾವಳಿಗಳು, ಘನತ್ಯಾಜ್ಯ ಪದಾರ್ಥಗಳ ವಿಲೇವಾರಿ, ಲೆಕ್ಕಪತ್ರ ಪರಿಶೀಲನೆ, ಆಯವ್ಯಯ ಮುಂಗಡ ಪತ್ರ, ವಾರ್ಡಗಳ ಬಗ್ಗೆ ಮಾಹಿತಿ ಮುಂತಾದ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಗರಪಾಲಿಕೆಗಳು ತರಬೇತಿ ನೀಡುತ್ತವೆ. ರಾಜಕೀಯ ಪಕ್ಷಗಳು, ಪಕ್ಷಗಳ ಬಗ್ಗೆ, ನಗರ ಪ್ರದೇಶಗಳಲ್ಲಿ ಪಕ್ಷವನ್ನು ಬಲಪಡಿಸುವ ಹಾಗೂ ಸಂಘಟಿಸುವ ವಿಧಾನಗಳ ಬಗ್ಗೆ ತರಬೇತಿ ನೀಡುತ್ತವೆ. ಆದರೆ ಈ ತರಬೇತಿಗಳನ್ನು ನಿಯಮಿತವಾಗಿ ನಡೆಸಲಾಗುವುದಿಲ್ಲ. ನಗರಪಾಲಿಕೆಗಳ ಸದಸ್ಯರ ಪಾತ್ರವನ್ನು ಹೆಚ್ಚು ಪರಿಣಾಮಕಾರಿಯಾಗಿ ತಾವು ನಿರ್ವಹಿಸುವುದು ಸಾಧ್ಯವಾಗುವ ಹಾಗೆ ತಮಗೆ ವಿಶೇಷ ತರಬೇತಿಯನ್ನು ನೀಡುವ ಅವಶ್ಯಕತೆ ಇದೆ ಎಂದು ಮಹಿಳಾ ಸದಸ್ಯರು ಅಭಿಪ್ರಾಯಪಡುತ್ತಾರೆ.

## ವಾರ್ಡಗಳ ಪ್ರತಿನಿಧಿಗಳಾಗಿ ಪಾತ್ರ

ನಗರಪಾಲಿಕೆಗಳ ಸದಸ್ಯರು ಹಾಗೂ ವಿಶೇಷವಾಗಿ ಮಹಿಳಾ ಸದಸ್ಯರು, ತಮ್ಮ ವಾರ್ಡಗಳಲ್ಲಿ ಆವಶ್ಯಕ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಇರುವ ಚುನಾಯಿತ ಪ್ರತಿನಿಧಿಗಳೆಂದು ತಮ್ಮ ಪಾತ್ರವನ್ನು ಅರ್ಥೈಸುತ್ತಾರೆ. ನಗರಪಾಲಿಕೆಗಳ ಸಭೆಗಳಿಗೂ ಅವರು ಹಾಜರಾಗುತ್ತಾರೆ, ಅಲ್ಲಿ ನಡೆಯುವ ಚರ್ಚೆಗಳಲ್ಲೂ ಭಾಗವಹಿಸುತ್ತಾರೆ, ಅಲ್ಲಿ ನಡೆಯುವ ಮತದಾನದಲ್ಲಿ ಮತಗಳನ್ನೂ ಚಲಾಯಿಸುತ್ತಾರೆ ಹಾಗೂ ಸಭೆಯಲ್ಲಿ ಚರ್ಚಿಸಲು ವಿಷಯಗಳನ್ನೂ ಮುಂದಿಡುತ್ತಾರೆ. ಅವರು ತಮ್ಮ ಪಕ್ಷದ ಸದಸ್ಯರಾಗಿ ಪಕ್ಷದ ಸಭೆಗಳನ್ನು ಸಂಘಟಿಸುವ, ಪಕ್ಷದ ನಿರ್ದೇಶಗಳನ್ನು ಪಾಲಿಸುವ, ಪಕ್ಷಕ್ಕೆ ಸದಸ್ಯರನ್ನು ನೋಂದಾಯಿಸುವ ಜವಾಬ್ದಾರಿ ಇರುವ ಪಕ್ಷದ ಸದಸ್ಯರೆಂದೂ ತಮ್ಮ ಪಾತ್ರವನ್ನು ಗುರುತಿಸಿಕೊಳ್ಳುತ್ತಾರೆ. ನಗರಪಾಲಿಕೆಗಳ ಮಹಿಳಾ ಸದಸ್ಯರ ಈ ಎರಡೂ ಜವಾಬ್ದಾರಿಗಳು ಸಾಕಷ್ಟು ಮಟ್ಟಿಗೆ ಒಂದರ ಮೇಲೊಂದು ಚಾಚಿಕೊಂಡಿವೆ ಎನ್ನಿಸುತ್ತದೆ.

## ವಾರ್ಡಗಳ ಮುಖಂಡರಾಗಿ ಪಾತ್ರ

ಈ ಅಧ್ಯಯನದಲ್ಲಿ ಬೆಳಕಿಗೆ ಬಂದ ಇನ್ನೊಂದು ವಿಷಯ ವೆಂದರೆ, ನಗರಪಾಲಿಕೆಗಳ ಪುರುಷ ಹಾಗೂ ಮಹಿಳಾ ಸದಸ್ಯರಿಬ್ಬರೂ ತಮ್ಮನ್ನು ತಮ್ಮ ತಮ್ಮ ವಾರ್ಡಗಳ ಮುಖಂಡರೆಂದು ಭಾವಿಸುತ್ತಾರೆ. ವಾರ್ಡಗಳಲ್ಲಿ ಉದ್ಭವಿಸುವ ಎಲ್ಲಾ ಸಮಸ್ಯೆಗಳನ್ನೂ, ಅಂದರೆ ನಗರಪಾಲಿಕೆಗಳ ವ್ಯಾಪ್ತಿಯಿಂದ ಹೊರಗೆ ಇರುವ ಸಮಸ್ಯೆಗಳನ್ನು ಹಾಗೂ ಸರಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಎತ್ತುವ ಸಮಸ್ಯೆಗಳನ್ನೂ, ಪರಿಹರಿಸಲು ಅವರು ಪ್ರಯತ್ನಿಸುತ್ತಾರೆ. ವಾರ್ಡಗಳಲ್ಲಿ ನಡೆಯುವ ಎಲ್ಲಾ ಒಳ್ಳೆಯ ಹಾಗೂ ಕೆಟ್ಟ ಗತಿವಿಧಿಗಳಿಗೆ ತಾವೇ ಜವಾಬ್ದಾರರೆಂದು ಅವರು ಭಾವಿಸುತ್ತಾರೆ. ತಾವು ಪ್ರತಿದಿನ ವಾರ್ಡಗಳಿಗೆ ಭೇಟಿ ನೀಡುವುದಾಗಿ 32 ಜನ ಸಂದರ್ಶಿತರು ಹೇಳಿದಾಗ ಅವರು ತಮ್ಮನ್ನು ವಾರ್ಡಗಳ ಮುಖಂಡರೆಂದು ಪರಿಗಣಿಸುತ್ತಾರೆಂಬುದು ಸ್ಪಷ್ಟವಾಯಿತು.

## ನಗರಪಾಲಿಕೆಗಳಲ್ಲಿ ಮಹಿಳೆಯರು: ಕೌನ್ಸಿಲ್ ಸಭೆಗಳು

### ಕೌನ್ಸಿಲ್ ಸಭೆಗಳು

ನಗರಪಾಲಿಕೆಯಲ್ಲಿ ಸದಸ್ಯರು ಸಭೆ ಸೇರುವ ಪರಿಷತ್ತು (ಕೌನ್ಸಿಲ್) ನಗರಪಾಲಿಕೆಯ ನಿರ್ಧಾರ ಕೈಗೊಳ್ಳುವ ಅಂಗ. ನಗರದ ಅಭಿವೃದ್ಧಿಯ ಬಗ್ಗೆ ಹಾಗೂ ವಿಶೇಷವಾಗಿ ವಾರ್ಡುಗಳ ಅಭಿವೃದ್ಧಿಯ ಬಗ್ಗೆ ಇರುವ ಸಮಸ್ಯೆಗಳನ್ನು ಚರ್ಚಿಸಲು ನಗರಪಾಲಿಕೆಯ ಸದಸ್ಯ ಪರಿಷತ್ತು ಸಾಮಾನ್ಯವಾಗಿ ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಅದು ಅಭಿವೃದ್ಧಿಯ ಕೆಲಸಗಳ ವಿಮರ್ಶೆ ಮಾಡುತ್ತದೆ, ಆಯವ್ಯಯದ ಮುಂಗಡ ಪತ್ರದ ಬಗ್ಗೆ ಚರ್ಚೆ ಮಾಡುತ್ತದೆ. ಇದಲ್ಲದೇ ಸಭೆಯಲ್ಲಿ ಶೂನ್ಯ ಸಮಯವೂ ಇರುತ್ತದೆ. ಆದರೆ, ಈ ಪರಿಷತ್ ಸಭೆಗಳಲ್ಲಿ ನೀತಿಯ ನಿರ್ಧಾರಗಳನ್ನು ಹೇಗೆ ಕೈಗೊಳ್ಳಲಾಗುತ್ತದೆ ಎಂಬ ಬಗ್ಗೆ ಮಹಿಳಾ ಸದಸ್ಯರು ತಮಗೆ ಗೊತ್ತಿಲ್ಲ ಎಂದು ಹೇಳಿದರು. ಪರಿಷತ್ ಸಭೆ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ಚರ್ಚಿಸುತ್ತದೆ ಹಾಗೂ ಸರಕಾರಿ ಯೋಜನೆಗಳನ್ನು ಮಂಜೂರು ಮಾಡುತ್ತದೆ ಎಂಬುದಾಗಿ ಅವರು ಹೇಳಿದರು. ಆದರೆ ಹಲವಾರು ಬಾರಿ ಪರಿಷತ್ತಿನ ಸಭೆಗಳಲ್ಲಿ ಅನಾವಶ್ಯಕ ವಿಷಯಗಳ ಬಗ್ಗೆ ಚರ್ಚೆಯಾಗುತ್ತದೆ ಎಂದು ಮಹಿಳಾ ಸದಸ್ಯರು ಅಭಿಪ್ರಾಯಪಟ್ಟರು.

### ಸಭೆಗಳಲ್ಲಿ ಲಿಂಗಭೇದ

ಪರಿಷತ್ತಿನ ಸಭೆಗಳಲ್ಲಿ ಮಹಿಳಾ ಸದಸ್ಯರು ಹಲವಾರು ತೊಂದರೆಗಳನ್ನು ಎದುರಿಸುತ್ತಾರೆ. ಸಾಮಾನ್ಯವಾಗಿ ಪುರುಷ ಸದಸ್ಯರು ಮಹಿಳಾ ಸದಸ್ಯರಿಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳಲು ಬಿಡುವುದಿಲ್ಲ. ಹಲವು ಬಾರಿಯಂತೂ ಮಹಿಳಾ ಸದಸ್ಯರನ್ನು ಮಾತನಾಡಲೂ ಬಿಡುವುದಿಲ್ಲ. ಪುರುಷ ಸದಸ್ಯರು ಸಭೆಗಳಲ್ಲಿ ತಮ್ಮ ಅಭಿಪ್ರಾಯವನ್ನು ಸಭಿಕರು ಕೇಳಿಸಿಕೊಳ್ಳಲಿ ಎಂಬ ಉದ್ದೇಶದಿಂದ ಅತಿ ಎತ್ತರದ ದನಿಯಲ್ಲಿ ಮಾತನಾಡುತ್ತಾರೆ. ಆದರೆ ಹಾಗೆ ಮಾತಾಡುವುದು ಮಹಿಳಾ ಸದಸ್ಯರಿಗೆ ಸಾಧ್ಯವಾಗುವುದಿಲ್ಲ. ಈ ಸಭೆಗಳಲ್ಲಿ ಮಹತ್ವದ ಹಾಗೂ ಸಂಬಂಧಪಟ್ಟ ವಿಷಯಗಳನ್ನು ಎತ್ತುವುದು ಹಾಗೂ ಅವುಗಳನ್ನು ಒತ್ತಿ ಹೇಳುವುದು ತಮಗೆ ಸಾಧ್ಯವಾಗುತ್ತಿಲ್ಲ ಎಂದು ಮಹಿಳಾ ಸದಸ್ಯರು ಅಭಿಪ್ರಾಯಪಡುತ್ತಾರೆ. ಸಭೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಿಡಲಿಲ್ಲ ಎಂದು ಸಂದರ್ಶಿತರಲ್ಲಿ 15 ಮಹಿಳೆಯರು ಹೇಳಿದರು. ಆದರೆ ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸುವಲ್ಲಿ ತಮಗೆ ಯಾವ ತೊಂದರೆಗಳೂ ಇಲ್ಲ ಎಂದು 14 ಮಹಿಳೆಯರು ಹೇಳಿದರು. ಈ ಸಭೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಮಹಿಳೆಯರ ಸ್ವಾತಂತ್ರ್ಯಕ್ಕೆ

ಇನ್ನೊಂದು ಅಡ್ಡಿ ಎಂದರೆ ಮಹಿಳೆಯರ ಮೇಲೆ ಮಾಡಲಾಗುವ ವೈಯಕ್ತಿಕ ಟೀಕೆಗಳು.

## ರಾಜಕೀಯ ಪಕ್ಷಗಳು ಹಾಗೂ ಪರಿಷತ್ ಸಭೆಗಳು

ಪ್ರತಿ ಸಭೆಯಲ್ಲಿಯೂ ಚರ್ಚೆ ಪಕ್ಷಗಳ ಆಧಾರದ ಮೇಲೆಯೇ ನಡೆಯುತ್ತದೆ ಹಾಗೂ ಪಕ್ಷದ ವಿಷಯಗಳೇ ಪ್ರಮುಖವಾಗಿರುತ್ತವೆ. ಹಲವಾರು ಬಾರಿಯಂತೂ ಅವು ಬರಿ ಜಗಳ ಮಾಡುವ ಅಖಾಡಗಳಾಗಿ ಬಿಡುತ್ತವೆ. ಇದರಿಂದಾಗಿ ಸಂಬಂಧಪಟ್ಟ ವಿಷಯಗಳಿಗೆ ದೊರಕಬೇಕಾದ ಮಹತ್ವ ದೊರಕುವುದಿಲ್ಲ. ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಆಡಳಿತ ಪಕ್ಷ ಹಾಗೂ ವಿರೋಧಿ ಪಕ್ಷಗಳ ನಿಲುವುಗಳು ಬಹಳ ಕಠಿಣವಾಗಿರುತ್ತವೆ, ಆದುದರಿಂದ ನಿಜವಾದ ಸಮಸ್ಯೆಗಳು ಪರಹಾರವಾಗದೇ ಉಳಿದು ಬಿಡುತ್ತವೆ. ನಗರಪಾಲಿಕೆಯ ಸದಸ್ಯ ಪರಿಷತ್ತಿನ ಸಭೆಗಿಂತ ಮೊದಲು ಆಡಳಿತ ಪಕ್ಷ ಹಾಗೂ ವಿರೋಧೀ ಪಕ್ಷಗಳು ತಮ್ಮ ತಮ್ಮ ಸದಸ್ಯರ ಪ್ರತ್ಯೇಕ ಸಭೆಗಳನ್ನು ನಡೆಸುತ್ತವೆ ಹಾಗೂ ಅಂಥ ಸಭೆಗಳಲ್ಲಿ ಪರಿಷತ್ತಿನ ಸಭೆಯಲ್ಲಿ ಬರಲಿರುವ ವಿಷಯಗಳ ಬಗ್ಗೆ ಆಯಾ ಪಕ್ಷಗಳ ಸದಸ್ಯರು ಯಾವ ನಿಲುವನ್ನು ಹೊಂದಿರಬೇಕು ಎಂಬ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ಇದರಿಂದಾಗಿ ಪರಿಷತ್ತಿನ ಸಭೆಗಳಲ್ಲಿ ವಿಷಯಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಸಾಧ್ಯವಾಗುವುದಿಲ್ಲ. ಈ ಸಭೆಗಳಲ್ಲಿ ಆಗುವ ಅಷ್ಟೋ ಇಷ್ಟೋ ಚರ್ಚೆಗಳು ಕೂಡ ಸಭೆಯ ನಂತರ ಕಾರ್ಯರೂಪಕ್ಕೆ ಬರುವುದಿಲ್ಲ. ಪರಿಷತ್ತಿನ ಸಭೆಗಳಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಸದಸ್ಯರಿಗೆ ಬರವಣಿಗೆಯಲ್ಲಿ ತಕ್ಷಣ ತಿಳಿಸುವುದೂ ಇಲ್ಲ. ಹಾಗೆ ತಿಳಿಸುವಲ್ಲಿ ಸಾಕಷ್ಟು ತಡವಾಗುತ್ತದೆ.

ನಗರಪಾಲಿಕೆಗಳ ಮಹಿಳಾ ಸದಸ್ಯರು ಏನು ಭಾವಿಸುತ್ತಾರೆ

- ನಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಬಿಡುವುದಿಲ್ಲ.
- ಪುರುಷರು ಸಭೆಗಳಲ್ಲಿ ಜೋರಾಗಿ ಅರಚುತ್ತಾರೆ, ನಾವು ಹಾಗೆ ಅರಚುಗುವು ಸಾಧ್ಯವಿಲ್ಲ.
- ಪಕ್ಷದ ಆಧಾರದ ಮೇಲೆ ಚರ್ಚೆಗಳು ನಡೆಯುತ್ತವೆ.
- ನಗರಪಾಲಿಕೆಯ ಪರಿಷತ್ತಿನ ಸಭೆಗಿಂತ ಮೊದಲು ನಡೆಯುವ ಪಕ್ಷದ ಸಭೆ ಪರಿಷತ್ತಿನಲ್ಲಿ ಪ್ರಾಮಾಣಿಕ ಚರ್ಚೆಯನ್ನು ಅಸಾಧ್ಯವಾಗಿಸುತ್ತದೆ.
- ನೀತಿ ನಿಯಮಗಳನ್ನು ಪಾಲಿಸದೇ ಇರುವುದರಿಂದ ಸಭೆಗಳಲ್ಲಿ ಬರಿ ಗೊಂದಲವಾಗುತ್ತದೆ.
- ಚರ್ಚೆಗಳು ನಿಷ್ಪ್ರಯೋಜಕ ಹಾಗೂ ಸಭೆಗಳು ಬರಿ

### ನಿಷ್ಪ್ರಯೋಜಕ ಚರ್ಚೆಗಳು

ನಗರಪಾಲಿಕೆಗಳ ಬಹಳಷ್ಟು ಸದಸ್ಯರು ಸಿದ್ಧತೆಗಳನ್ನು ಮಾಡಿಕೊಂಡು ಸಭೆಗಳಿಗೆ ಬರುವುದಿಲ್ಲ. ಆದುದರಿಂದ ಹಲವರು ಸಭೆಯಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಹೊಸದಾದುದೇನನ್ನೂ ಹೇಳುವುದಿಲ್ಲ. ಇನ್ನೂ ಹಲವರು ಸಭೆಗೆ ಬರಿ ಅಡ್ಡಿಯನ್ನು ಉಂಟು ಮಾಡುತ್ತಾರೆ. ಸಭೆಗಳಲ್ಲಿ ನೀತಿ ನಿಯಮಗಳನ್ನು ಪಾಲಿಸುವುದಿಲ್ಲ. ಆದುದರಿಂದ ಅಲ್ಲಿ ಬರಿ ಗೊಂದಲ ನಿರ್ಮಾಣವಾಗುತ್ತದೆ. ಸಂದರ್ಶಿತರಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಅಂದರೆ 16 ಮಹಿಳೆಯರು ಸಭೆಗಳಲ್ಲಿ ಚರ್ಚೆಗಳು ನಿಷ್ಪ್ರಯೋಜಕವಾಗಿರುತ್ತವೆ ಹಾಗೂ ಸಭೆಗಳು ಬರಿ ಗೊಂದಲದಿಂದ ಕೂಡಿರುತ್ತವೆ ಎಂದು ಹೇಳಿದರು. ಅತ್ಯಂತ ಕಷ್ಟದಿಂದ ನಿರ್ಧಾರಗಳನ್ನು

ಕೈಗೊಳ್ಳಲಾಗುತ್ತದೆ ಆದರೂ ಅಂಥ ನಿರ್ಧಾರಗಳನ್ನು ಕೂಡ ಕಾರ್ಯಗತ ಮಾಡಲಾಗುವುದಿಲ್ಲ. ಸದಸ್ಯರು ಸಭೆಗಳಲ್ಲಿ ಪಕ್ಷದ ನೀತಿಗೆ ಬದ್ಧರಾಗಿರಬೇಕಾದ ಆವಶ್ಯಕತೆ ಕೂಡ ಚರ್ಚೆಗಳನ್ನು ಕುಂಠಿತಗೊಳಿಸುತ್ತದೆ.

## ನಗರಪಾಲಿಕೆಗಳಲ್ಲಿ ಮಹಿಳೆಯರು: ಪಕ್ಷದ ನಿರ್ಬಂಧಗಳು

### ರಾಜಕೀಯ ಪಕ್ಷಗಳ ಪಾತ್ರ

ಎಲ್ಲಾ ರಾಜಕೀಯ ಪಕ್ಷಗಳು ನಗರಪಾಲಿಕೆಗಳ ಆಡಳಿತದಲ್ಲಿ ಒಂದು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ನಗರಪಾಲಿಕೆಯಲ್ಲಿ ಬಹುಮತ ಪಡೆದಿರುವ ಪಕ್ಷದ ಸದಸ್ಯರು ನಗರಪಾಲಿಕೆಯ ಅಧ್ಯಕ್ಷ ಹಾಗೂ ವಿವಿಧ ಸ್ಥಾಯೀ ಸಮಿತಿಗಳ ಅಧ್ಯಕ್ಷ ಸ್ಥಾನಗಳನ್ನು ಪಡೆದಿರುತ್ತಾರೆ, ಆದುದರಿಂದ ನಗರಪಾಲಿಕೆಗಳ ಆಡಳಿತದಲ್ಲಿ ರಾಜಕೀಯ ಪಕ್ಷಗಳು ಪರೋಕ್ಷವಾಗಿ ಹಸ್ತಕ್ಷೇಪ ಮಾಡುತ್ತಿರುತ್ತವೆ. ನಗರಪಾಲಿಕೆಗಳಲ್ಲಿ ಸದಸ್ಯರಾಗಿ ಚುನಾಯಿತರಾಗಿರುವ ತನ್ನ ಸದಸ್ಯರ ಮೂಲಕ ರಾಜಕೀಯ ಪಕ್ಷಗಳು ನಗರಪಾಲಿಕೆಗಳ ಆಡಳಿತದಲ್ಲಿ ಒಂದು ಪಾತ್ರವನ್ನು ವಹಿಸಿದರೂ ನಗರಪಾಲಿಕೆಗಳ ಬಗ್ಗೆ ಪಕ್ಷಗಳ ಆಸಕ್ತಿ ಅಷ್ಟಕ್ಕಷ್ಟೇ ಇರುತ್ತದೆ. ಹಲವು ಸಂದರ್ಭಗಳಲ್ಲಿ ಪುರುಷ ಹಾಗೂ ಮಹಿಳಾ ಸದಸ್ಯರು ಸ್ಥಳೀಯ ಅಭಿವೃದ್ಧಿಯ ವಿಷಯದಲ್ಲಿ ಪಕ್ಷದ ಹಸ್ತಕ್ಷೇಪವನ್ನು ವಿರೋಧಿಸಿದ್ದೂ ಉಂಟು.

### ಪಕ್ಷದ ದೃಷ್ಟಿಕೋನ

ಮಹಿಳಾ ಸದಸ್ಯರಿಗೆ ನಗರಪಾಲಿಕೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಒಂದು ಅವಕಾಶವನ್ನು ಕೊಟ್ಟಿರುವುದಾಗಿ, ಅವರನ್ನು ಚುನಾವಣೆಗಳಲ್ಲಿ ಗೆಲ್ಲಿಸಿರುವುದಾಗಿ, ಸಮಾಜಸೇವೆ ಮಾಡಲು ಅವಕಾಶವನ್ನು ಕಲ್ಪಿಸಿರುವುದಾಗಿ ಹಾಗೂ ಮತದಾರರಲ್ಲಿ ಪಕ್ಷದ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಬರುವಂತೆ ಕೆಲಸ ಮಾಡಲು ಅವಕಾಶ ಕಲ್ಪಿಸಿರುವುದಾಗಿ ಪಕ್ಷ ಭಾವಿಸುತ್ತದೆ. ಆದರೆ, ನಗರಪಾಲಿಕೆಗಳ ಸದಸ್ಯರ ಗುಣಮಟ್ಟದಲ್ಲಿ ಅವನತಿ ಆಗಿರುವುದಾಗಿ ಬಹಳಷ್ಟು ಪಕ್ಷದ ಮುಖಂಡರು ಭಾವಿಸುತ್ತಾರಲ್ಲದೇ ನಗರಪಾಲಿಕೆಗಳಿಗೆ ಪಕ್ಷರಹಿತ ಚುನಾವಣೆಗಳನ್ನು ಮಾಡಲು, ಅಂದರೆ ನಗರಪಾಲಿಕೆಗಳ ಚುನಾವಣೆಗಳಲ್ಲಿ ಪಕ್ಷಗಳು ಸ್ಪರ್ಧಿಸದಿರುವಂತೆ ಮಾಡಲು, ಇದು ಸೂಕ್ತ ಸಮಯ ಎಂದು ಭಾವಿಸುತ್ತಾರೆ.

### ಪಕ್ಷ ಏನನ್ನು ಮಾಡುತ್ತದೆ

ಪಕ್ಷ, ಮಹಿಳಾ ಪ್ರತಿನಿಧಿಗಳಿಗೋಸ್ಕರ ಈ ಕೆಳಕಂಡವುಗಳನ್ನು ಮಾಡುತ್ತದೆ:

- ಚುನಾವಣೆಗಳಲ್ಲಿ ಸ್ಪರ್ಧಿಸಲು ಮಹಿಳೆಯರನ್ನು ಗುರುತಿಸುತ್ತದೆ.
- ಅವರಿಗೆ ಬೆಂಬಲ, ಮಾರ್ಗದರ್ಶನ ಹಾಗೂ ಸಹಾಯವನ್ನು ನೀಡುತ್ತದೆ.
- ಅವರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ.
- ನಗರಪಾಲಿಕೆಯ ಪರಿಷತ್ತಿನ ಸಭೆಗಿಂತ ಮೊದಲು ಪಕ್ಷದ ಸದಸ್ಯರ ಸಭೆ ಕರೆದು ಪರಿಷತ್ತಿನ ಸಭೆಯಲ್ಲಿ ಪಕ್ಷದ ನಿಲುವನ್ನು ಸ್ಪಷ್ಟಪಡಿಸುತ್ತದೆ.
- ನಗರಪಾಲಿಕೆಗಳ ಸದಸ್ಯರು ಪಕ್ಷಕ್ಕಾಗಿ ಹಾಗೂ ಪಕ್ಷದ ಕೆಲಸಗಳಿಗಾಗಿ ಹಣವನ್ನು ಸಂಗ್ರಹಿಸುವಲ್ಲಿ ಸಹಾಯ ಮಾಡುತ್ತದೆ.

**ಪಕ್ಷ ಏನನ್ನು ಮಾಡುವುದಿಲ್ಲ**

**ಪಕ್ಷ, ಮಹಿಳಾ ಸದಸ್ಯರಿಗೋಸ್ಕರ ಈ ಕೆಳಕಂಡವುಗಳನ್ನು ಮಾಡುವುದಿಲ್ಲ:**

- ಅದು ತರಬೇತಿ ಶಿಬಿರಗಳನ್ನು ನಿಯಮಿತವಾಗಿ ನಡೆಸುವುದಿಲ್ಲ.
- ಮಹಿಳಾ ಸದಸ್ಯರ ಸಾಮರ್ಥ್ಯವನ್ನು ಬೆಳೆಸುವುದಕ್ಕೆ ಅದಕ್ಕೊಂದು ನೀತಿ ಇಲ್ಲ.
- ಮಹಿಳಾ ಸದಸ್ಯರ ರಾಜಕೀಯ ಹಾಗೂ ಪಾರಿವಾರಿಕ ಸಂಬಂಧಗಳಲ್ಲಿ ಸಾಮರಸ್ಯವನ್ನು ತರಲು, ಅಥವಾ ಅವರು ವಾರ್ಡಗಳ ಉಸ್ತುವಾರಿ ಮಾಡಲು ಅಥವಾ ನಗರಪಾಲಿಕೆಯ ಪರಿಷತ್ತಿನ ಸಭೆಗಳಲ್ಲಿ ಅವರು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡಲು, ಪಕ್ಷ ವಿಶೇಷವಾದ ಕ್ರಮಗಳನ್ನೇನೂ ಕೈಗೊಳ್ಳುವುದಿಲ್ಲ.

## ನಗರಪಾಲಿಕೆಗಳಲ್ಲಿ ಮಹಿಳೆಯರು:

## ರಾಜ್ಯ ಸರಕಾರ ಮತ್ತು ಅಧಿಕಾರಿ ವರ್ಗ

## ಸರಕಾರ ಏನು ಮಾಡುತ್ತದೆ ಹಾಗೂ ಏನು ಮಾಡುವುದಿಲ್ಲ:

### ಮಾಡುತ್ತದೆ:

- ನಗರಪಾಲಿಕೆಗಳಿಗೆ ಕಾನೂನಿನ ಸ್ಥಾನ ಕೊಡುತ್ತದೆ ಹಾಗೂ ಅವುಗಳಿಗೆ ಚುನಾವಣೆಗಳನ್ನು ನಡೆಸುತ್ತದೆ.
- ಅನುದಾನಗಳನ್ನು ಕೊಡುತ್ತದೆ ಹಾಗೂ ನಗರ ಪಾಲಿಕೆಗಳು ಜಾರಿಗೊಳಿಸಲು ಯೋಜನೆಗಳನ್ನು ಹಂಚಿಕೊಡುತ್ತದೆ.
- ಒಮ್ಮೊಮ್ಮೆ, ಆಡಳಿತ ತರಬೇತಿ ಸಂಸ್ಥೆಯ ಮೂಲಕ ತರಬೇತಿಗಳನ್ನು ಆಯೋಜಿಸುತ್ತದೆ.
- ಸಾಕಷ್ಟು ಪ್ರಮಾಣದಲ್ಲಿ ಅಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ಸಂವಿಧಾನದ 74ನೆಯ ತಿದ್ದುಪಡಿಯ ಬಗ್ಗೆ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದೆ.

### ಮಾಡಿಲ್ಲ:

- ನಗರಪಾಲಿಕೆಗಳ ಆಡಳಿತದಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ಕೆಲಸಮಾಡುವಂತೆ ಅವರ ಬಲವನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಿಲ್ಲ.
- ನಗರಪಾಲಿಕೆಗಳ ಸದಸ್ಯರ ಸಭೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಹಾಗೂ ಪುರುಷ ಮತ್ತು ಮಹಿಳಾ ಸದಸ್ಯರು ಸಮನಾಗಿ ಭಾಗವಹಿಸುವಂತೆ ಮಾಡಲು ಪ್ರಯತ್ನಗಳನ್ನು ಮಾಡಿಲ್ಲ.
- ನಗರಪಾಲಿಕೆಗಳ ಚುನಾಯಿತ ಸದಸ್ಯರು ಹಾಗೂ ಅವುಗಳ ಅಧಿಕಾರಿಗಳ ನಡುವಣ ಸಂಬಂಧಗಳನ್ನು ಸೌಹಾರ್ದಪೂರ್ಣವನ್ನಾಗಿ ಮಾಡಲು ಪ್ರಯತ್ನಗಳನ್ನು ಮಾಡಿಲ್ಲ.

## ರಾಜ್ಯ ಸರಕಾರದ ಪಾತ್ರ

ರಾಜ್ಯ ಸರಕಾರ ಹಾಗೂ ಅದರ ವಿವಿಧ ಇಲಾಖೆಗಳು ನಗರಪಾಲಿಕೆಗಳನ್ನು ಅಂಚೆ ಇಲಾಖೆ ಎಂದು ಭಾವಿಸುತ್ತವೆ. ಸರಕಾರಿ ಯೋಜನೆಗಳನ್ನು ನಗರಪಾಲಿಕೆ ಎಂಬ ಅಂಚೆ ಡಬ್ಬಕ್ಕೆ ಹಾಕಿ. ಅದು ಆ ಯೋಜನೆಗಳನ್ನು ಜನರಿಗೆ ತಲುಪಿಸುತ್ತದೆ. ಸರಕಾರದ ಯೋಜನೆಗಳನ್ನು ಬರಿ ಜಾರಿಗೊಳಿಸುವ ಸಂಸ್ಥೆಗಳಂತೆ ನಗರಪಾಲಿಕೆಗಳೊಂದಿಗೆ ನಡೆದುಕೊಳ್ಳಲಾಗುತ್ತದೆ.

## ಸರಕಾರದ ಬಗ್ಗೆ ಮಹಿಳಾ ಸದಸ್ಯರ ಅಭಿಪ್ರಾಯ

ಮಹಿಳಾ ಸದಸ್ಯರು ಸರಕ್ಕಾರವನ್ನೊಂದು ಅತ್ಯುಚ್ಚ ಪ್ರಾಧಿಕಾರ ಎಂದು ಭಾವಿಸುತ್ತಾರೆ. ಅದು ಕಾನೂನು

ಮಾಡುವ, ನೀತಿಯನ್ನು ನಿರ್ಧರಿಸುವ, ಜಾರಿಗೊಳಿಸಲು ಯೋಜನೆಗಳನ್ನು ಕೊಡುವ ಹಾಗೂ ಹಣಕಾಸನ್ನು ಒದಗಿಸುವ ಸಂಸ್ಥೆ ಎಂದು ಭಾವಿಸುತ್ತಾರೆ. ಆದುದರಿಂದ ಸರಕಾರ, ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚು ಹಣವನ್ನು ಕೊಡಬೇಕು, ನಗರಪಾಲಿಕೆಗಳ ಸಮರ್ಪಕ ಆಡಳಿತಕ್ಕಾಗಿ ಸರಿಯಾದ ನಿಯಮಗಳನ್ನು ಮಾಡಬೇಕು, ಜಾರಿಗೊಳಿಸಲು ಇನ್ನೂ ಹೆಚ್ಚು ಯೋಜನೆಗಳನ್ನು ಕೊಡಬೇಕು ಹಾಗೂ ನಗರಪಾಲಿಕೆಗಳಿಗೆ ಇನ್ನೂ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕು ಎಂದು ಮಹಿಳಾ ಸದಸ್ಯರು ಅಪೇಕ್ಷಿಸುತ್ತಾರೆ. ಹಾಗೆಯೇ, ಸರಕಾರ ನಗರಪಾಲಿಕೆಗಳ ಚುನಾಯಿತ ಸದಸ್ಯರಿಗಿರುವ ಸಂಭಾವನೆವನ್ನು ಹೆಚ್ಚಿಸಬೇಕು, ನಗರಪಾಲಿಕೆಗಳ ಚುನಾಯಿತ ಸದಸ್ಯರಾಗಿ ಪರಿಣಾಮಕಾರಿಯಗಿ ಕೆಲಸಮಾಡಲು ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕು ಹಾಗೂ ನಗರಪಾಲಿಕೆಗಳಿಗೆ ಸಮಯಕ್ಕೆ ಸರಿಯಾಗಿ ಚುನಾವಣೆಗಳನ್ನು ನಡೆಸಬೇಕು ಎಂದೂ ಅಪೇಕ್ಷಿಸುತ್ತಾರೆ.

ಸರಕಾರದ ಬಗ್ಗೆ ಮಹಿಳಾ ಸದಸ್ಯರ ಅಭಿಪ್ರಾಯ

* ನಗರಪಾಲಿಕೆಗಳು ಸರಕಾರದ ಅಂಚೆ ಡಬ್ಬಗಳು.
* ಸರಕಾರ ಉಚ್ಚ ಪ್ರಾಧಿಕಾರ
* ಸರಕಾರ ಕಾನೂನು ರೂಪಿಸುತ್ತದೆ.
* ಸರಕಾರ ನೀತಿಯನ್ನು ನಿರೂಪಿಸುತ್ತದೆ
* ಸರಕಾರ ಯೋಜನೆಗಳನ್ನು ಕೊಡುತ್ತದೆ

## ಅಧಿಕಾರಿಗಳ ಪಾತ್ರ

ನಗರಪಾಲಿಕೆಗಳ ಮಹಿಳಾ ಸದಸ್ಯರು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ನಗರಪಾಲಿಕೆಗಳ ಅಧಿಕಾರಿಗಳ ಸಹಕಾರ ಅತ್ಯಗತ್ಯ. ಆದರೆ, ನಗರಪಾಲಿಕೆಗಳ ಚುನಾಯಿತ ಸದಸ್ಯರು ಹಾಗೂ ಅಧಿಕಾರಿಗಳ ನಡುವೆ ಯಾವಾಗಲೂ ತಿಕ್ಕಾಟ ಇರುವುದಾಗಿ ಕಂಡುಬರುತ್ತದೆ. ಮಹಿಳಾ ಸದಸ್ಯರ ಅಧಿಕಾರಾವಧಿಯು ಮೊದಲ ಮೊದಲಲ್ಲಿ ನಗರಪಾಲಿಕೆಗಳ ಅಧಿಕಾರಿಗಳು ಅವರ ಬಗ್ಗೆ

ಗಮನ ಕೊಡುತ್ತಾರೆ ಹಾಗೂ ಅವರ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಮಾಡಿಕೊಡುತ್ತಾರೆ, ಆದರೆ ನಂತರ, ಬರಬರುತ್ತ, ಅಧಿಕಾರಿಗಳು ಅವರ ಬಗ್ಗೆ ಉದಾಸೀನ ಮಾಡಲು ಪ್ರಾರಂಭಿಸುತ್ತಾರೆ. ಅವರ ಕಡತಗಳ ವಿಲೇವಾರಿಯಲ್ಲಿ ನಿಧಾನ ಮಾಡುತ್ತಾರೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಮಂಜೂರಾತಿಯಲ್ಲಿ ನಿಧಾನ ಮಾಡುತ್ತಾರಷ್ಟೇ ಅಲ್ಲ ಅಡೆತಡೆಗಳನ್ನೂ ಉಂಟು ಮಾಡುತ್ತಾರೆ. ಹೀಗೆ ಅಧಿಕಾರಿಗಳು ಮಹಿಳಾ ಸದಸ್ಯರ ಕಾರ್ಯದಕ್ಷತೆಯ ಬಗ್ಗೆ ಜನರಿಗೆ ಪ್ರತಿಕೂಲ ಅಭಿಪ್ರಾಯ ಮೂಡಿ ಬರುವಂತೆ ಮಾಡುತ್ತಾರೆ. ಉದಾಹರಣೆಗೆ, ಸಂದರ್ಶನ ಮಾಡಿದ ಮಹಿಳಾ ಸದಸ್ಯರಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ 14 ಮಹಿಳೆಯರು, ತಮ್ಮ ವಾರ್ಡಗಳ ಸಮಸ್ಯೆಗಳ ಬಗ್ಗೆ ತಾವು ಅಧಿಕಾರಿಗಳಿಂದ ಅಡಚಣೆಗಳನ್ನು ಎದುರಿಸ ಬೇಕಾಗುತ್ತಿದೆ ಎಂದು ಹೇಳಿದರು. ತಾವು, ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೂ ಇತರೆ ವಿಷಯಗಳ ಬಗ್ಗೆ ಅಧಿಕಾರಿಗಳ ಸುತ್ತಮುತ್ತ ಓಡಾಡುತ್ತಿರಬೇಕು ಎಂದು ಅಧಿಕಾರಿಗಳು ಅಪೇಕ್ಷಿಸುವುದಾಗಿ ಅವರು ಹೇಳಿದರು. ಅಧಿಕಾರಿಗಳು ತುರ್ತಿನ ಕೆಲಸಗಳ ಬಗ್ಗೆ ಗಮನ ಕೊಡಬೇಕು, ತಮ್ಮೊಂದಿಗೆ ಸಹಕರಿಸಬೇಕು, ಸಹಾಯ ಹಾಗೂ ಮಾರ್ಗದರ್ಶನ ಮಾಡಬೇಕು, ನಿಯಮಗಳನ್ನು ಪಾಲಿಸಬೇಕು ಹಾಗೂ ಭ್ರಷ್ಟರಾಗಿರಬಾರದು ಎಂದು ಮಹಿಳಾ ಸದಸ್ಯರು ಅಪೇಕ್ಷಿಸುತ್ತಾರೆ. ಇದಕ್ಕೆ ಪ್ರತಿಯಾಗಿ ಮಹಿಳಾ ಸದಸ್ಯರು ಸಭ್ಯರಾಗಿ ವರ್ತಿಸಬೇಕು, ಸಭ್ಯ ಭಾಷೆಯನ್ನು ಬಳಸಬೇಕು ಹಾಗೂ ತಮ್ಮ ಜೊತೆಗೆ ಕಠಿಣವಾಗಿ ವರ್ತಿಸಬಾರದು ಎಂದು ಅಧಿಕಾರಿಗಳು ಅಪೇಕ್ಷಿಸುತ್ತಾರೆ.

**ಅಧಿಕಾರಿಗಳ ಬಗ್ಗೆ ಮಹಿಳಾ ಸದಸ್ಯರ ಅಭಿಪ್ರಾಯ**

* ಅವರೊಂದಿಗೆ ಯಾವಾಗಲೂ ತಿಕ್ಕಾಟವಿರುತ್ತದೆ.
* ಅವರು ನಮ್ಮನ್ನು ನಿರ್ಲಕ್ಷಿಸುತ್ತಾರೆ.
* ಅವರು ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಮಾಡುತ್ತಾರೆ.
* ಅವರು ತಾಂತ್ರಿಕ ತೊಂದರೆಗಳನ್ನು ಒಡ್ಡುತ್ತಾರೆ.
* ನಾವು ಅವರ ಹಿಂದೆಮುಂದೆ ಓಡಾಡಿಕೊಂಡಿರಬೇಕೆಂದು ಅಪೇಕ್ಷಿಸುತ್ತಾರೆ.

## ನಗರಪಾಲಿಕೆಗಳಲ್ಲಿ ಮಹಿಳೆಯರು: ಕಾರ್ಯದಕ್ಷತೆಯ ನಿರೀಕ್ಷೆಗಳು

### ಪುರುಷ ಸದಸ್ಯರ ಅಪೇಕ್ಷೆಗಳು

ಮಹಿಳಾ ಸದಸ್ಯರು ಪುರುಷ ಸದಸ್ಯರೊಂದಿಗೆ ಸಹಕರಿಸುತ್ತಾರೆ ಎನ್ನುವುದನ್ನು ಪುರುಷ ಸದಸ್ಯರು ಒಪ್ಪಿಕೊಳ್ಳುತ್ತಾರೆ. ಹಾಗೂ ಮಹಿಳಾ ಸದಸ್ಯರಿಂದ ತಮಗೆ ಏನೂ ತೊಂದರೆ ಇಲ್ಲ ಎಂದೂ ಅವರು ಹೇಳುತ್ತಾರೆ.

ಆದರೆ ಮಹಿಳಾ ಸದಸ್ಯರು ತಮ್ಮ ನಿರ್ಧಾರಗಳನ್ನು ತಾವೇ ಕೈಗೊಳ್ಳಬೇಕು, ವಾರ್ಡಿನ ಕೆಲಸಗಳನ್ನು ಮಾಡಿಸಬೇಕು, ಸಭೆಗಳಿಗೆ ಹಾಜರಾಗುವಾಗ ಸಭೆಯ ನಿಯಮಗಳನ್ನು ಓದಿಕೊಂಡು ಸಿದ್ಧತೆಗಳನ್ನು ಮಾಡಿಕೊಂಡು ಸಭೆಗಳಿಗೆ ಬರಬೇಕು ಹಾಗೂ ಪಾರದರ್ಶಕವಾಗಿರಬೇಕು ಎಂದು ಅವರು ಹೇಳುತ್ತಾರೆ. ಮಹಿಳಾ ಸದಸ್ಯರೊಂದಿಗೆ ಅವರ ಗಂಡಂದಿರು ಬರಬಾರದು ಎಂದು ಅವರು ಅಭಿಪ್ರಾಯ ಪಟ್ಟರು. ಮಹಿಳಾ ಸದಸ್ಯರಿಗೆ ಜನಸಾಮಾನ್ಯರಿಂದ ಹೆಚ್ಚಿನ ಸಹಾನುಭೂತಿ ದೊರಕುತ್ತದೆ ಹಾಗೂ ಮೀಸಲಾತಿ ಯಿಂದಾಗಿ ಅವರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದು ಪುರುಷ ಸದಸ್ಯರು ಭಾವಿಸುತ್ತಾರೆ.

### ಪುರುಷ ಸದಸ್ಯರಿಂದ ಅಪೇಕ್ಷೆಗಳು

ವಾರ್ಡಿಗೆ ಸಂಬಂಧಪಟ್ಟ ಕೆಲಸಗಳಲ್ಲಿ ಪುರುಷ ಸದಸ್ಯರು ತಮ್ಮೊಂದಿಗೆ ಸಹಕರಿಸುವುದಾಗಿ ಬಹಳಷ್ಟು ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು. ಆದರೆ ನಗರಪಾಲಿಕೆಗಳ ಸಭೆಗಳಲ್ಲಿ ಪುರುಷ ಸದಸ್ಯರು ತಮ್ಮದೇ ವರ್ಚಸ್ಸನ್ನು ಬೀರಿ ಸಭೆಯನ್ನು ಆವರಿಸಿಕೊಂಡು ಬಿಡುತ್ತಾರೆ, ಮಹಿಳಾ ಸದಸ್ಯರನ್ನು ಟೀಕಿಸುತ್ತಾರೆ, ಅಲ್ಲದೆ ಹಲವು ಬಾರಿಯಂತೂ ಅವರಿಗೆ ಮಾತನಾಡಲು ಬಿಡುವುದೇ ಇಲ್ಲ. ಒಂದೇ ಪಕ್ಷದ ಪುರುಷ ಸದಸ್ಯರು ಹೆಚ್ಚು ಸಹಕರಿಸುತ್ತಾರೆ, ಬೇರೆ ಪಕ್ಷದ ಪುರುಷ ಸದಸ್ಯರು ಹೆಚ್ಚು ವಾದವಿವಾದ ಮಾಡುತ್ತಾರೆ, ಸಹಕರಿಸುವುದಿಲ್ಲ ಹಾಗೂ ಅಭಿವೃದ್ಧಿಯ ಕೆಲಸ ಕಾರ್ಯಗಳನ್ನು ವಿರೋಧಿಸು ತ್ತಾರೆ. ಪುರುಷ ಸದಸ್ಯರಿಗೆ ಮುಕ್ತ ಮನಸ್ಸಿರಬೇಕು ಹಾಗೂ ಅವರು ಮಹಿಳಾ ಸದಸ್ಯರೊಂದಿಗೆ ಮುಕ್ತವಾಗಿ ಚರ್ಚಿಸಬೇಕು ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು. ಆದರೆ ಪುರುಷ ಸದಸ್ಯರು ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುವಲ್ಲಿ ಹೆಚ್ಚಿನ ಒತ್ತಡ ಹಾಕುವುದು ಸಾಧ್ಯವಾಗುತ್ತದೆ, ಅವರು ಹೆಚ್ಚು ಮುಕ್ತವಾಗಿ ಓಡಾಡಬಲ್ಲರು ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು.

### ನಾಗರಿಕರಿಂದ ಅಪೇಕ್ಷೆಗಳು

ನಾಗರಿಕರು, ಸ್ಥಳೀಯ ಸಂಘ ಸಂಸ್ಥೆಗಳು ಹಾಗು ಸರಕಾರೇತರ ಸಂಘಟನೆಗಳು

ವಾರ್ಡಿನಲ್ಲಿ ಹಾಗೂ ನಗರದಲ್ಲಿ ನಿರ್ವಹಿಸುವ ಪಾತ್ರದ ಮಹತ್ವವನ್ನು ಮಹಿಳಾ ಸದಸ್ಯರು ಗುರುತಿಸುತ್ತಾರೆ ಹಾಗೂ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ,

ನಗರಪಾಲಿಕೆಗಳ ಸದಸ್ಯರು ಕಷ್ಟ ಪಟ್ಟು ಕೆಲಸಮಾಡಬೇಕು ಹಾಗು ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ನಾಗರಿಕರು ಬಯಸುತ್ತಾರೆ, ಆದರೆ ಅವರು ವಿಷಯಗಳನ್ನು ತಿಳಿದುಕೊಂಡಿರುವುದಿಲ್ಲ, ಕೆಲಸಗಳು ಧಿಢೀರನೇ ಆಗಬೇಕೆಂದು ಅಪೇಕ್ಷಿಸುತ್ತಾರೆ ಹಾಗು ಕಂದಾಯಗಳನ್ನು ಪಾವತಿ ಮಾಡುವುದಿಲ್ಲ ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಡುತ್ತಾರೆ. ನಾಗರಿಕರಿಗೆ ಅವರ ಅಧಿಕಾರಗಳ ಬಗ್ಗೆ ಹಾಗು ನಗರಪಾಲಿಕೆಗಳ ಮಹತ್ವದ ಬಗ್ಗೆ ಅರಿವು ಮೂಡಿಸುವುದು ಆವಶ್ಯಕ ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಡುತ್ತಾರೆ.

## ಸ್ಥಳೀಯ ಸಂಸ್ಥೆಗಳಿಂದ ಅಪೇಕ್ಷೆಗಳು

ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಸ್ಪಂದಿಸಬೇಕು, ತಮ್ಮ ಸಹಕಾರ ಹಾಗೂ ಪ್ರೋತ್ಸಾಹಗಳನ್ನು ನೀಡಬೇಕು, ಒಳ್ಳೆಯ ಸೇವೆಯನ್ನು ಒದಗಿಸಬೇಕು, ರಾಜಕೀಯ ಒತ್ತಡಗಳಿಲ್ಲದೇ ಕೆಲಸ ಮಾಡಬೇಕು ಹಾಗೂ ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ಸ್ವಾವಲಂಬಿಗಳಾಗಬೇಕು ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು. ನಗರಪಾಲಿಕೆಗಳ ಸದಸ್ಯರು ತಮ್ಮೊಡನೆ ಸಹಕರಿಸಬೇಕೆಂದೂ, ಮೂಲಭೂತ ಸೌಲಭ್ಯಗಳನ್ನು ತಕ್ಷಣ ಒದಗಿಸಬೇಕೆಂದೂ ಸ್ಥಳೀಯ ಸಂಸ್ಥೆಗಳು ಅಪೇಕ್ಷೆ ಪಡುತ್ತವೆ. ಆದರೆ, ನಗರಪಾಲಿಕೆಗಳ ಯೋಜನೆಗಳ ಬಗ್ಗೆ, ಸದಸ್ಯರ ಕಾರ್ಯಕ್ಷೇತ್ರಗಳ ಬಗ್ಗೆ, ಮೂಲಭೂತ ಸೌಲಭ್ಯಗಳನ್ನು ರಕ್ಷಿಸುವ ಬಗ್ಗೆ, ಘನ ನಿಷ್ಪ್ರಯೋಜಕ ವಸ್ತುಗಳ ವಿಲೇವಾರಿಯ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವುದು ಆವಶ್ಯಕ ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಡುತ್ತಾರೆ.

## ಸರಕಾರೇತರ ಸಂಘಟನೆಗಳಿಂದ ಅಪೇಕ್ಷೆಗಳು

ಸರಕಾರೇತರ ಸಂಘಟನೆಗಳು ಯಾವಾಗಲೂ ಯಾವುದಾದರೊಂದು ತಪ್ಪು ಕಂಡು ಹಿಡಿಯುವುದರಲ್ಲೇ ಇರುತ್ತವೆ ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು. ಆದರೆ ಅವು ಒಳ್ಳೆಯ ಸೇವೆಯನ್ನು ಒದಗಿಸಬೇಕು, ವಾರ್ಡನಲ್ಲಿರುವ ಸಮಸ್ಯೆಗಳನ್ನು ವಾರ್ಡ ಪ್ರತಿನಿಧಿಗಳ ಹತ್ತಿರ ತೆಗೆದುಕೊಂಡು ಹೋಗಬೇಕು, ಘನ ತ್ಯಾಜ್ಯ ವಸ್ತುಗಳ ವಿಲೇವಾರಿಯ ಬಗ್ಗೆ, ಆರೋಗ್ಯದ ಬಗ್ಗೆ, ತರಬೇತಿ ಕೊಡಬೇಕು ಎಂದು ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು. ಸರಕಾರೇತರ ಸಂಘಟನೆಗಳು ಮಹಿಳಾ ಸದಸ್ಯರಿಗೆ ತರಬೇತಿಯನ್ನು ನೀಡಿರುವವೇ ಎಂಬ ಪ್ರಶ್ನೆಗೆ 18 ಮಹಿಳೆಯರು ನೀಡಿರುವುದಾಗಿ ಹೇಳಿದರು ಹಾಗೂ 31 ಮಹಿಳೆಯರು ಇಲ್ಲ ಎಂದು ಹೇಳಿದರು. ಅಭಿವೃದ್ಧಿಯ ಕೆಲಸಕಾರ್ಯಗಳಲ್ಲಿ ಸರಕಾರೇತರ ಸಂಘಟನೆಗಳು ತೊಡಗಿಕೊಳ್ಳಬೇಕು ಹಾಗೂ ಜನರ ಪ್ರತಿನಿಧಿಗಳೊಂದಿಗೆ ಸೇರಿ ಕೆಲಸ ಮಾಡಬೇಕು ಎಂದು ಅವರು ಅಭಿಪ್ರಾಯ ಪಟ್ಟರು. ಸರಕಾರೇತರ ಸಂಘಟನೆಗಳು ರಾಜಕೀಯದ ಬಗ್ಗೆ ಜನರಲ್ಲಿ ಕೆಟ್ಟ ಅಭಿಪ್ರಯ ಮೂಡಿಸುತ್ತವೆ ಎಂದು ಕೆಲವು ಮಹಿಳಾ ಸದಸ್ಯರು ಹೇಳಿದರು.

## ರಾಜ್ಯ ಸರಕಾರದಿಂದ ಅಪೇಕ್ಷೆಗಳು

ರಾಜ್ಯ ಸರಕಾರ ತಮಗೆ, ನಗರಪಾಲಿಕೆಗಳ ಕಾನೂನಿನ ಬಗ್ಗೆ, ನಿಯಮಗಳ ಬಗ್ಗೆ, ಸದಸ್ಯರ ಅಧಿಕಾರ ಹಾಗೂ ಜವಾಬ್ದಾರಿಗಳ ಬಗ್ಗೆ, ಅಧಿಕಾರಿಗಳೊಂದಿಗೆ ವರ್ತಿಸುವ ವಿಧಾನಗಳ ಬಗ್ಗೆ, ವ್ಯಕ್ತಿತ್ವದ ಬೆಳವಣಿಗೆಯ ಬಗ್ಗೆ ತರಬೇತಿ ನೀಡಬೇಕೆಂದೂ, ಹೊಸ ಯೋಜನೆಗಳ ಬಗ್ಗೆ ತಮಗೆ ಮಾಹಿತಿ ಒದಗಿಸಬೇಕೆಂದೂ ಮಹಿಳಾ ಸದಸ್ಯರು ಅಭಿಪ್ರಾಯ ಪಟ್ಟರು. ರಾಜ್ಯ ಸರಕಾರ ನಿಯಮಿತವಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರಬೇಕು ಎಂದೂ ಅವರು ಅಭಿಪ್ರಾಯ ಪಟ್ಟರು.

## 6. ಅಧ್ಯಯನದ ಫಲಿತಾಂಶಗಳು

ನಗರ ಪ್ರದೇಶಗಳ ಆಡಳಿತದಲ್ಲಿ ಚುನಾಯಿತ ಮಹಿಳಾ ಸದಸ್ಯರು ಹೇಗೆ ತೊಡಗಿಕೊಂಡಿದ್ದಾರೆ ಎಂಬ ಬಗ್ಗೆ ಈ ಅಧ್ಯಯನ ಪ್ರಾಥಮಿಕ ಮಹಿತಿಯನ್ನು ಒದಗಿಸುತ್ತದೆ. ನಗರಪಾಲಿಕೆಗಳ ಮಹಿಳಾ ಸದಸ್ಯರಿಗೆ ಇದೊಂದು ಹೊಸ ಅನುಭವ. ಸಾರ್ವಜನಿಕ ವ್ಯವಹಾರಗಳೊಂದಿಗೆ ಪರಿಚಿತರಾಗಲು ಅವರಿಗೆ ಇದೊಂದು ಅವಕಾಶ. ನಗರಪಾಲಿಕೆಗಳ ಮಹಿಳಾ ಸದಸ್ಯರು ಈ ಹೊಸ ಜವಾಬ್ದಾರಿಯನ್ನು ಉತ್ಸಾಹದೊಂದಿಗೆ ಹಾಗೂ ಒಂದು ಸವಾಲಾಗಿ ಸ್ವೀಕರಿಸುತ್ತಿದ್ದಾರೆ. ಜನರ ಚುನಾಯಿತ ಪ್ರತಿನಿಧಿಯಾಗುವುದು ಬರಿ ಪುರುಷರ ಕಾರ್ಯಕ್ಷೇತ್ರವಲ್ಲ, ಒಬ್ಬ ಚುನಾಯಿತ ಜನ ಪ್ರತಿನಿಧಿಯ ಪಾತ್ರವನ್ನು ತಾವೂ ಕೂಡ ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲೆವು ಎಂಬ ಬಗ್ಗೆ ಈ ಅನುಭವ ಅವರಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬುತ್ತಿದೆ. ನಗರಪಾಲಿಕೆಗಳ ಮಹಿಳಾ ಸದಸ್ಯರಲ್ಲಿ ಹೆಚ್ಚಿನ ಪಾಲು ಸದಸ್ಯರು ಧೈರ್ಯವಂತರಾಗಿದ್ದಾರೆ, ಅವರು ತಮ್ಮ ಅಭಿಪ್ರಾಯವನ್ನು ಯಾವ ಸಂಕೋಚವೂ ಇಲ್ಲದೇ ಒತ್ತಿ ಹೇಳುತ್ತಾರೆ ಹಾಗೂ ನಗರಪಾಲಿಕೆಯ ಆಡಳಿತದಲ್ಲಿ ಆತ್ಮವಿಶ್ವಾಸ-ದೊಂದಿಗೆ ಪಾಲ್ಗೊಳ್ಳುತ್ತಿದ್ದಾರೆ. ಆದರೆ ಹಲವು ಮಹಿಳೆಯರು ಮಾತ್ರ ಮನೆಗಳಲ್ಲಿ, ನಗರಪಾಲಿಕೆಗಳಲ್ಲಿ ಹಾಗೂ ರಾಜಕೀಯ ಪಕ್ಷಗಳಲ್ಲಿ ಇರುವ ನಿರ್ಬಂಧಿತ ವಾತಾವರಣದಿಂದಾಗಿ ಹಾಗೂ ಪ್ರೋತ್ಸಾಹದ ಕೊರತೆಯಿಂದಾಗಿ ಬಹಳ ಸೀಮಿತ ಅನುಭವ ಹೊಂದಿದ್ದಾರೆ.

ನಗರಪಾಲಿಕೆಗಳ ಚುನಾಯಿತ ಮಹಿಳಾ ಸದಸ್ಯರು ಕೂಡಾ ಸಮರ್ಥ ಜನಪ್ರತಿನಿಧಿಗಳಾಗಬಲ್ಲರು ಎಂಬ ಸತ್ಯವನ್ನು ನಗರಪಾಲಿಕೆಗಳ ಹಾಗೂ ರಾಜಕೀಯ ಪಕ್ಷಗಳ ಪುರುಷ ಸದಸ್ಯರು ಅರಿತುಕೊಳ್ಳುತ್ತಿದ್ದಾರೆ. ನಗರಪಾಲಿಕೆಗಳ ಚುನಾಯಿತ ಸದಸ್ಯರಾಗಿ ಮಹಿಳಾ ಸದಸ್ಯರು ಕೂಡಾ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲರು ಎಂಬುದನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ. ಆದರೆ ರಾಜಕೀಯದಲ್ಲಿ ಮಹಿಳೆಯರ ಪೈಪೋಟಿಯಿಂದ ಹಲವು ಪುರುಷರು ಆತಂಕಿತರಾಗಿದ್ದಾರೆ. ಮಹಿಳೆಯರು ಪುರುಷರಿಗೆ ಸಮಾನರು ಎನ್ನುವುದಾದರೆ ಮಹಿಳೆಯರಿಗೆ ಕೊಡಲಾಗುತ್ತಿರುವ ಮೀಸಲಾತಿ ಪುರುಷರ ಬಗ್ಗೆ ಮಾಡಲಾಗುತ್ತಿರುವ ತಾರತಮ್ಯ ಎಂದು ಅವರು ವಾದಿಸುತ್ತಾರೆ. ಸಮಾಜದಲ್ಲಿ ಇರುವ ಲಿಂಗಾಧಾರಿತ ತಾರತಮ್ಯದ ಭಾವನೆಯೇ ಇಂಥ ಅಭಿಪ್ರಾಯಕ್ಕೆ ಕಾರಣವಾಗಿದೆ. ಈ ತಾರತಮ್ಯದ ಭಾವನೆಯಿಂದಾಗಿ ಪುರುಷ ಸದಸ್ಯರು ನಗರಪಾಲಿಕೆಗಳ ಸದಸ್ಯರ ಸಭೆಯಲ್ಲಿ ಮಹಿಳಾ ಸದಸ್ಯರನ್ನು ಮಾತನಾಡಲು ಬಿಡುವುದಿಲ್ಲ. ಇದರಿಂದಾಗಿ ನಗರಪಾಲಿಕೆಗಳ ಆಡಳಿತದಲ್ಲಿ ಪರಿಣಾಮಕಾರಿಯಾಗಿ ಭಾಗ ವಹಿಸುವ ಅವಕಾಶದಿಂದ ಮಹಿಳಾ ಸದಸ್ಯರು ವಂಚಿತರಾಗುತ್ತಾರೆ.

ಇಂದೂ ಕೂಡ ಮನೆಗಳಲ್ಲಿ, ನಗರಪಾಲಿಕೆಗಳಲ್ಲಿ ಹಾಗೂ ರಾಜಕೀಯ ಪಕ್ಷಗಳಲ್ಲಿ ವಾತಾವರಣ ಪುರುಷರಿಗೇ ಅನುಕೂಲಕರವಾಗಿದೆ. ಇಂದು, ನಗರಪಾಲಿಕೆಗಳ ಮಹಿಳಾ ಸದಸ್ಯರು ತಮ್ಮ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವ ಮೂಲಕ ತಮ್ಮ ಕಾರ್ಯದಕ್ಷತೆಯನ್ನು ಉತ್ತಮ ಪಡಿಸಿಕೊಳ್ಳಲು ಬೇಕಾಗುವ ಕ್ರಿಯಾತ್ಮಕ ಪ್ರಯತ್ನಗಳ ಹಾಗೂ ಗುಣಾತ್ಮಕ ಕ್ರಿಯೆಗಳ ಆವಶ್ಯಕತೆ ಇದೆ. ಜೊತೆಗೆ ನಗರಪಾಲಿಕೆಗಳ ಆಡಳಿತದಲ್ಲಿ ಲಿಂಗಾಧಾರಿತ ಸಮಾನತೆಯ ಪ್ರಜ್ಞೆಯನ್ನು ಬೆಳೆಸುವ ಆವಶ್ಯಕತೆಯೂ ಇದೆ. ರಾಜಕೀಯ ಪಕ್ಷಗಳು ಹಾಗೂ ಸರಕಾರಗಳು, ಮಹಿಳಾ ಸದಸ್ಯರ ಪಾಲ್ಗೊಳ್ಳುವಿಕೆಯ ಪ್ರಸಕ್ತ ಸಾಧ್ಯತೆಗಳನ್ನು ಹೆಚ್ಚಿಸುವ ದಿಕ್ಕಿನಲ್ಲಿ ಹಾಗೂ ಸಂವಿಧಾನದ ೭೪ನೆಯ ತಿದ್ದುಪಡಿಯ ಆಶೋತ್ತರಗಳನ್ನು ಸಾಕಾರಗೊಳಿಸುವ ದಿಕ್ಕಿನಲ್ಲಿ

ಕ್ರಮಗಳನ್ನು ಕೈಗೊಳ್ಳುವ ಆವಶ್ಯಕತೆ ಇದೆ.

ನಗರಪಾಲಿಕೆಗಳ ಸದಸ್ಯರಿಗೆ ರಾಜಕೀಯ ಪಕ್ಷಗಳಿಂದ ಅವುಗಳ ಸದಸ್ಯರಾಗಿರುವ ಕಾರಣದಿಂದ ಹಾಗೂ ನಗರಪಾಲಿಕೆಗಳಿಂದ ಅವುಗಳ ಸದಸ್ಯರಾಗಿರುವ ಕಾರಣದಿಂದ ಮಾರ್ಗಸೂಚಿಗಳನ್ನು ಕೊಡಲಾಗಿರುತ್ತದೆ. ಆದರೆ ಪಕ್ಷದ ಸದಸ್ಯರು ನಗರಪಾಲಿಕೆಗಳ ಚುನಾಯಿತ ಸದಸ್ಯರಾಗಿ ಕೆಲಸ ಮಾಡುವ ಬಗ್ಗೆ ಇರಬೇಕಾದ ಮಾರ್ಗದರ್ಶನ ಇಲ್ಲಿ ಕಳಚಿಕೊಂಡಿರುವ ಕೊಂಡಿಯಾಗಿದೆ. ಈ ಬಗ್ಗೆ ರಾಜಕೀಯ ಪಕ್ಷಗಳ ದೃಢವಾದ ಬದ್ಧತೆ ಮಾತ್ರ ಅದರ ಸದಸ್ಯರನ್ನು ನಗರಪಾಲಿಕೆಗಳ ಚುನಾಯಿತ ಸದಸ್ಯರ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಮಾಡಬಲ್ಲದು. ಆದುದರಿಂದ ಈ ದಿಕ್ಕಿನಲ್ಲಿ ರಾಜಕೀಯ ಪಕ್ಷಗಳು ಒಂದು ಸ್ಪಷ್ಟವಾದ ನಿಲುವನ್ನು ತಳೆಯುವುದು ಅತ್ಯಾವಶ್ಯಕವಾಗಿದೆ.

ಪ್ರಸ್ತುತ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ ಈ ಅಧ್ಯಯನ ನಗರಪಾಲಿಕೆಗಳ ಮಹಿಳಾ ಸದಸ್ಯರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡಲು ಆವಶ್ಯಕ ಕ್ರಮಗಳನ್ನೂ ಸೂಚಿಸುತ್ತಿದೆ. ಆದರೆ ಈ ಅಧ್ಯಯನದ ಪರಿಕಲ್ಪನೆಯ ಟಿಪ್ಪಣಿಯಲ್ಲಿ ಎತ್ತಿದ ಪ್ರಶ್ನೆಗಳನ್ನು ಪರಿಹರಿಸಲು ಇನ್ನೂ ಹೆಚ್ಚಿನ ಅಧ್ಯಯನಗಳನ್ನು ಮಾಡುವ ಅವಶ್ಯಕತೆ ಇದೆ.

ಮಹಿಳಾ ಸದಸ್ಯರ ಕಾರ್ಯದಕ್ಷತೆಗೆ ಉಪಾಯಗಳು

* ಪುರುಷ ಸದಸ್ಯರು ಮುಕ್ತ ಮನಸ್ಸಿಟ್ಟುಕೊಂಡಿರಬೇಕು, ಮುಕ್ತವಾಗಿ ಚರ್ಚಿಸಬೇಕು.
* ನಾಗರಿಕರು ನಮ್ಮೊಂದಿಗೆ ಸಹಕರಿಸಬೇಕು, ತೆರಿಗೆಗಳನ್ನು ಕೊಡಬೇಕು.
* ಸ್ಥಳೀಯ ಸಂಸ್ಥೆಗಳು ಸಹಕರಿಸಬೇಕು, ಪ್ರೋತ್ಸಾಹಿಸಬೇಕು, ಸೇವೆ ಸಲ್ಲಿಸಬೇಕು.
* ಸರಕಾರೇತರ ಸಂಸ್ಥೆಗಳು ಸದಸ್ಯರೊಂದಿಗೆ ಸೇರಿ ಕೆಲಸ ಮಾಡಬೇಕು.
* ಸರಕಾರ ತರಬೇತಿ ನೀಡಬೇಕು, ಮಾಹಿತಿ ಒದಗಿಸಬೇಕು.

## 7. ಸಹಾಯ ಸೂತ್ರಗಳು

### ರಾಜಕೀಯ ಪಕ್ಷಗಳಿಗಾಗಿ

### ಅಧಿಕಾರಾವಧಿಯ ಪ್ರಾರಂಭದಲ್ಲಿ:

- ಸಧ್ಯ ನಗರಪಾಲಿಕೆಗಳಿಗೆ ಚುನಾವಣೆಗಳ ಘೋಷಣೆಯಾದ ನಂತರವೇ ಸ್ಪರ್ಧಿಗಳನ್ನು ಆಯ್ಕೆಮಾಡಲಾಗುತ್ತದೆ. ಇದರಿಂದಾಗಿ ಚುನಾವಣೆಗಳ ನಂತರ ಚುನಾಯಿತ ಸದಸ್ಯರು ತಮ್ಮ ಕೆಲಸಗಳನ್ನು ದಕ್ಷತೆಯಿಂದ ಮಾಡುವುದು ಅಸಾಧ್ಯವಾಗುತ್ತದೆ.

- ಪಕ್ಷದ ಸದಸ್ಯರನ್ನು ವಾರ್ಡಗಳ ಸ್ತರದಲ್ಲಿಯೇ, ನಾಗರಿಕರ ಹಕ್ಕುಗಳು, ಜವಾಬ್ದಾರಿಗಳು, ನಗರಪಾಲಿಕೆಗಳ ಕೆಲಸಕಾರ್ಯಗಳು ಮೊದಲಾದವುಗಳ ಬಗ್ಗೆ ನಿಯಮಿತವಾಗಿ ತರಬೇತಿಯನ್ನು ನೀಡುತ್ತಿರಬೇಕು. ಇವರ ಮಧ್ಯದಿಂದ ಒಂದು ಸಣ್ಣ ನಾಗರಿಕರ ಗುಂಪನ್ನು ಆರಿಸಿಕೊಂಡು ಅವರ ಮಧ್ಯದಿಂದ ಚುನಾವಣೆಯ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಇದರಿಂದಾಗಿ ಮನಬಂದಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ತಪ್ಪುತ್ತದೆ.

- ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳಿಗೆ ನಗರಪಾಲಿಕೆಗಳ ಚುನಾಯಿತ ಸದಸ್ಯರ ಪಾತ್ರ, ಅವರ ಅಧಿಕಾರಗಳು ಹಾಗೂ ಜವಾಬ್ದಾರಿಗಳು, ನಗರಪಾಲಿಕೆಗಳ ಜವಾಬ್ದಾರಿಗಳು, ಕಾರ್ಯಕ್ಷೇತ್ರಗಳು ಹಾಗೂ ಸಂವಿಧಾನದ 74ನೆಯ ತಿದ್ದುಪಡಿ ಹಾಗೂ ಜನತಾಂತ್ರಿಕ ವಿಕೇಂದ್ರೀಕರಣ ಮೊದಲಾದ ವಿಷಯಗಳ ಬಗ್ಗೆ ತರಬೇತಿ ನೀಡಬೇಕು.

- ನಗರಪಾಲಿಕೆಯ ಚುನಾಯಿತ ಸದಸ್ಯನಾಗಿ ಹಾಗೂ ರಾಜಕೀಯ ಪಕ್ಷದ ಸದಸ್ಯನಾಗಿ ಅವರು ನಿರ್ವಹಿಸಬೇಕಾದ ದ್ವಂದ್ವ ಪಾತ್ರಗಳ ಬಗ್ಗೆ ಅವರಿಗೆ ಸ್ಪಷ್ಟ ಚಿತ್ರ ನೀಡಬೇಕು.

- ಈ ಬಗ್ಗೆ ಮಹಿಳಾ ಸದಸ್ಯರಿಗಾಗಿ ವಿಶೇಷ ಸಭೆಗಳನ್ನು ಆಯೋಜಿಸಬೇಕು.

- ನಗರಪಾಲಿಕೆಗಳ ಚುನಾವಣೆಯಲ್ಲಿ ಪ್ರಕಟಿಸಲಾದ ಚುನಾವಣಾ ಘೋಷಣಾ ಪತ್ರವನ್ನು ಆಧಾರವಾಗಿಟ್ಟುಕೊಂಡು ತಯಾರಿಸಲಾದ ಒಂದು ಕ್ರಿಯಾ ಯೋಜನೆಯನ್ನು ಚರ್ಚಿಸಲು ಒಂದು ಸಭೆಯನ್ನು ಕರೆಯಬೇಕು ಹಾಗೂ ಕ್ರಿಯೆಗೆ ಆದ್ಯತೆ ನೀಡಿ, ಅದನ್ನು ವಾರ್ಡಗಳ ಸ್ತರಕ್ಕಿಳಿಸಿ, ಸಾಧಿಸಲು ಗುರಿಗಳನ್ನು ನಿರ್ಧರಿಸಬೇಕು.

- ಒಂದು ದಿನದ ಒಂದು ಸಭೆಯನ್ನು ಪ್ರತಿ ತಿಂಗಳು ನಡೆಸಿ, ಅದರಲ್ಲಿ ಕ್ರಿಯಾ ಯೋಜನೆಯನ್ನು, ಸಾಧನೆಗಳನ್ನು, ಎದುರಿಸಿದ ತೊಂದರೆಗಳ ಬಗ್ಗೆ ಹಾಗೂ ಬರಲಿರುವ ತಿಂಗಳ ಯೋಜನೆಯ ಬಗ್ಗೆ ಚರ್ಚಿಸಬೇಕು. ನಗರಪಾಲಿಕೆಯ ಸದಸ್ಯರ ಪರಿಷತ್ ಸಭೆಯೊಂದಿಗೆ ಹೊಂದಿಕೊಂಡೇ ಈ ಸಭೆಯನ್ನು ಕರೆಯಬಹುದು.

- ಮಹಿಳಾ ಸದಸ್ಯರ ಕುಟುಂಬದ ಸದಸ್ಯರಿಗಾಗಿ ಪ್ರತ್ಯೇಕ ತರಬೇತಿಯನ್ನು ನಡೆಸಬೇಕು ಹಾಗೂ ಅದರಲ್ಲಿ ನಗರಪಾಲಿಕೆಗಳ ಸದಸ್ಯರಿಗೆ ಸಂಬಂಧಪಟ್ಟಂತೆ ಕುಟುಂಬದ ಸದಸ್ಯರು ಹೇಗೆ ಸಹಾಯಕ ಪಾತ್ರವನ್ನು ನಿರ್ವಹಿಸಬಹುದು ಎಂಬ ಬಗ್ಗೆ ತರಬೇತಿ ನೀಡಬೇಕು.

### ಪರಿಷತ್ತಿನ ಸಭೆಗಳಲ್ಲಿ:

- ನಗರಸಭೆಯ ಪರಿಷತ್ತಿನ ಮೊದಲ ಸಭೆಗಿಂತ ಮೊದಲೇ ಆ ಸಭೆಯಲ್ಲಿ ಚುನಾಯಿತ ಸದಸ್ಯರ ಪಾತ್ರ, ಸಭೆಯ ಉದ್ದೇಶ, ನಡಾವಳಿಗಳು ಮೊದಲಾದ ವಿಷಯಗಳ ಬಗ್ಗೆ ತರಬೇತಿ

ನೀಡಬೇಕು. ಮುಂದಿನ ನಾಲ್ಕು ತಿಂಗಳುಗಳ ವರೆಗೆ ನಿಯಮಿತವಾಗಿ ಸಭೆಗಳನ್ನು ಕರೆದು, ನಗರಪಾಲಿಕೆಗಳ ಸದಸ್ಯರ ಅನುಭವಗಳನ್ನು ತಿಳಿದುಕೊಳ್ಳಲು ಹಾಗೂ ಸುಧಾರಣೆಗಳನ್ನು ಸಲಹೆ ಮಾಡಲು ಪ್ರಯತ್ನಿಸಬೇಕು. ಪಕ್ಷದ ಹಲವು ಹಿರಿಯ ಸದಸ್ಯರು ಪ್ರೇಕ್ಷಕರ ಮೊಗಸಾಲೆಯಿಂದ ಸಭೆಗಳ ನಡಾವಳಿಗಳನ್ನು ಅವಲೋಕಿಸಿ ತಮ್ಮ ಟೀಕೆ ಟಿಪ್ಪಣಿಗಳನ್ನು ಕೊಡಬಹುದು.

- ನಗರಪಾಲಿಕೆಯು ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸಲು ಆತ್ಮವಿಶ್ವಾಸ ಮೂಡಿಬರುವಂತೆ ಮಾಡಲು ಮಹಿಳಾ ಸದಸ್ಯರಿಗಾಗಿ ವಿಶೇಷ ಸಭೆಗಳನ್ನು ನಡೆಸಬೇಕು.

- ರಾಜಕೀಯದಲ್ಲಿ ಹಾಗೂ ನಗರಪಾಲಿಕೆಗಳ ಆಡಳಿತಗಳಲ್ಲಿ ಮಹಿಳಾ ಸದಸ್ಯರು ಭಾಗವಹಿಸುವುದರ ಮಹತ್ವವನ್ನು ತಿಳಿಸಲು ಮಹಿಳಾ ಮತ್ತು ಪುರುಷ ಸದಸ್ಯರಿಗಾಗಿ ಹಾಗೂ ಪಕ್ಷದ ಸದಸ್ಯರಿಗಾಗಿ ಲಿಂಗಭೇದ ಕುರಿತು ಅರಿವು ಮೂಡುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

- ನಗರಪಾಲಿಕೆಗಳ ಪರಿಷತ್ತಿನ ಸಭೆಗಳಲ್ಲಿ ಹಲವು ನಿಯಮಗಳನ್ನು ಪಾಲಿಸಬೇಕು: ಪ್ರತಿಯೊಬ್ಬ ಸದಸ್ಯನಿಗೂ ಸಭೆಯಲ್ಲಿ ಭಾಗವಹಿಸಲು ಹಾಗೂ ಮಾತನಾಡಲು ಅಧಿಕಾರವಿರುತ್ತದೆ, ಪ್ರತಿಯೊಬ್ಬ ಸದಸ್ಯನೂ ಸಭೆಯ ಕಾರ್ಯಕ್ರಮವನ್ನು ಪಾಲಿಸಬೇಕು ಹಾಗೂ ಸಭೆಯ ಗೌರವವನ್ನು ಕಾಪಾಡಿಕೊಂಡು ಬರಬೇಕು.

- ಸದಸ್ಯರು ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ ಹಾಗೂ ಅವು ಚರ್ಚೆಗಳ ಮೇಲೆ ಆಧರಿಸುವಂತೆ ಮಾಡುವ ಮೂಲಕ ಪರಿಷತ್ತಿನ ಸಭೆಗಳನ್ನು ಹೆಚ್ಚು ಅರ್ಥಪೂರ್ಣವನ್ನಾಗಿ ಮಾಡಬೇಕು. ಈ ಸಭೆಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯನ್ನು ಬಲಪಡಿಸಲು ಪಕ್ಷ ಸ್ಪಷ್ಟವಾದ ನಿಲುವನ್ನು ತಾಳಬೇಕು.

## ವಾರ್ಡ ಕೆಲಸಗಳ ನಿರ್ವಹಣೆ:

- ವಾರ್ಡ ಸ್ತರದಲ್ಲಿ ವಾರ್ಡ ಸದಸ್ಯರು ನಗರಪಾಲಿಕೆಗಳ ಸದಸ್ಯರಿಗೆ ಸಹಾಯಕರಾಗಿ ಪಾತ್ರ ನಿರ್ವಹಿಸಬೇಕು. ರಾಜಕೀಯವನ್ನು ಹೊರತುಪಡಿಸಿ ವಾರ್ಡಿನ ಅಭಿವೃದ್ಧಿಗಾಗಿ ಇವರು ವಾರ್ಡಿನ ಜನರನ್ನು ಪ್ರೇರಿಸುವಲ್ಲಿ ಸಮರ್ಥರಾಗಬೇಕು. ನಗರಪಾಲಿಕೆಗಳ ಸದಸ್ಯರಿಗೆ ಸಹಾಯ ಮಾಡುವಲ್ಲಿ ಇವರ ಪಾತ್ರವನ್ನು ಸ್ಪಷ್ಟಪಡಿಸಬೇಕು.

- ನಗರಪಾಲಿಕೆಯ ಸದಸ್ಯರು ವಾರ್ಡಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಂತೆ, ನಾಗರಿಕರ ಹಾಗೂ ಸ್ಥಳೀಯ ಸಂಸ್ಥೆಗಳ ಜೊತೆಗೆ ಪರ್ಯಾಲೋಚಿಸುವಂತೆ, ವಾರ್ಷಿಕವಾಗಿ ಜಾರಿಗೊಳಿಸುವ ಕ್ರಿಯಾಯೋಜನೆಯೊಂದನ್ನು ತಯಾರಿಸುವಂತೆ, ಈ ಕ್ರಿಯಾಯೋಜನೆಯ ಅಂಶಗಳನ್ನು ನಗರಪಾಲಿಕೆಯ ಪರಿಷತ್ತಿನ ಸಭೆಯೊಂದಿಗೆ ಹೊಂದಿಸುವಂತೆ ಹಾಗೂ ಅವುಗಳನ್ನು ಜಾರಿಗೊಳಿಸುವಂತೆ ಅವರಿಗೆ ತರಬೇತಿ ನೀಡಬೇಕು.

- ನಗರಪಾಲಿಕೆಗಳ ಸದಸ್ಯರ, ವಿಶೇಷವಾಗಿ ಮಹಿಳಾ ಸದಸ್ಯರ ಪರಿಣಾಮಕಾರಿ ಚಲನಶೀಲತೆಗಾಗಿ ಪಕ್ಷ ಅವರ ಕುಟುಂಬದ ಸದಸ್ಯರಿಂದ ಆಶ್ವಾಸನೆಗಳನ್ನು ಪಡೆಯಬೇಕು.

- ಸಭೆಗಳಿಗೆ ಹಾಜರಾಗಲು ಹಾಗೂ ಬೆಳಗು ಮುಂಜಾನೆ ಅಥವಾ ಸಂಜೆ, ವಾರ್ಡಗಳ ಕೆಲಸಗಳನ್ನು ಮಾಡಲು ಅಥವಾ ಕಾಮಗಾರಿ ನಡೆದ ಸ್ಥಳಗಳಿಗೆ ಭೇಟಿ ನೀಡಲು ಪಕ್ಷ ಮಹಿಳಾ ಸದಸ್ಯರಿಗೆ ಅನುಕೂಲಗಳನ್ನು ಮಾಡಿಕೊಡಬೇಕು.

- ಕ್ರಿಯಾ ಯೋಜನೆ ವಾರ್ಡಗೆ ಸಂಬಂಧಪಟ್ಟ ನಿಜವಾದ ಸಮಸ್ಯೆಗಳನ್ನು ಪ್ರತಿಫಲಿಸುವ ಹಾಗೆ ಮಾಡಲು ವಾರ್ಡ ಮಟ್ಟದಲ್ಲಿ ನಗರಪಾಲಿಕೆಗಳ ಸದಸ್ಯರು ಹಾಗೂ ನಾಗರಿಕರ ನಡುವೆ ಸತತವಾಗಿ ಸಂಭಾಷಣೆ ನಡೆಯುವ ಹಾಗೆ ಪಕ್ಷ ನೋಡಿಕೊಳ್ಳಬೇಕು. ಇದಕ್ಕಾಗಿ ವಾರ್ಡ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸುವ ಹಾಗೆ ಸದಸ್ಯರನ್ನು ತರಬೇತಿಗೊಳಿಸಬೇಕು.

## ನಗರಪಾಲಿಕೆಗಳ ಸದಸ್ಯರ ಬಗ್ಗೆ ನೀತಿ:

- ನಗರಪಾಲಿಕೆಗಳ ಚುನಾಯಿತ ಪ್ರತಿನಿಧಿಗಳಾಗುವ ಪಕ್ಷದ ಸದಸ್ಯರ ಪಾತ್ರವನ್ನು ವಿವರಿಸುವ ಒಂದು ದಾಖಲೆಯನ್ನು ಹೊಂದಿರುವುದು ಪಕ್ಷಕ್ಕೆ ಅತ್ಯಂತ ಆವಶ್ಯಕ. ಒಬ್ಬ ಚುನಾಯಿತ ಪ್ರತಿನಿಧಿಯ ಪಾತ್ರವನ್ನು ನಿರ್ವಹಿಸಲು ಅದು ಪಕ್ಷದ ಸದಸ್ಯರಿಗೆ ಸ್ಪಷ್ಟತೆಯನ್ನು ನೀಡಬೇಕು.

- ಇಂದಿನ ರಾಜಕೀಯ ಪಕ್ಷಗಳ ರಚನೆ ಒಂದು ಒಳ್ಳೆಯ ತರಬೇತಿಯ ಸಾಧನವಾಗಬಹುದು ಹಾಗೂ ಸ್ಥಳೀಯ ಸ್ತರದಿಂದ ರಾಷ್ಟ್ರೀಯ ಸ್ತರದ ವರೆಗೆ ಮಹಿಳೆಯರ ಭಾಗವಹಿಸುವಿಕೆಯನ್ನು ಸಾಧ್ಯಮಾಡಲು ರಾಜಕೀಯ ಪಕ್ಷಗಳು ಮಹಿಳೆಯರಿಗೆ ಪಕ್ಷದಲ್ಲಿ ಸ್ಥಾನಮಾನಗಳನ್ನು ಕೊಡಬೇಕು.

- ನಗರಪಾಲಿಕೆಗಳ ಚುನಾಯಿತ ಸದಸ್ಯರು ಯಾವ ದಿಕ್ಕಿನಲ್ಲಿ ಮುಂದುವರೆಯಬೇಕು ಎಂಬ ಬಗ್ಗೆ ಹಾಗೂ ಮಹಿಳಾ ಸದಸ್ಯರ ದಕ್ಷತೆಯನ್ನು ಹೆಚ್ಚಿಸಲು ಮಹಿಳೆಯರಿಗೆ ಒದಗಿಸಬೇಕಿರುವ ಕ್ರಮಗಳನ್ನು ಈ ನೀತಿ ದಾಖಲೆಯಲ್ಲಿ ಸ್ಪಷ್ಟವಾಗಿ ಹೇಳಿರಬೇಕು.

## ದಕ್ಷತೆಯನ್ನು ಹೆಚ್ಚಿಸಲು ಮಾರ್ಗೋಪಾಯಗಳು:

- ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಹಾಗೂ ನೀತಿಗಳ ಬಗ್ಗೆ ಚರ್ಚೆ ಮಾಡುವ ಮೂಲಕ ನಗರಪಾಲಿಕೆಗಳ ಸದಸ್ಯರಿಗೆ ಕಲಿಕೆಯ ಸಾಧನವಾಗಿ ಪಕ್ಷ ಚರ್ಚೆಗಳನ್ನು, ತ್ರೈಮಾಸಿಕ ಕಾರ್ಯಾಗಾರ ಗಳನ್ನು ಹಾಗೂ ವಾರ್ಷಿಕ ಸಮ್ಮೇಳನಗಳನ್ನು ಆಯೋಜಿಸಬೇಕು.

- ನಗರಪಾಲಿಕೆಗಳ ಸದಸ್ಯರು ಬೇರೆ ಪಟ್ಟಣಗಳಿಗೆ ಹಾಗೂ ನಗರಗಳಿಗೆ ಭೇಟಿ ನೀಡಿ ಅನುಭವಗಳನ್ನು ಹಂಚಿಕೊಳ್ಳುವುದು ಸಾಧ್ಯವಾಗುವಂತೆ ಪಕ್ಷಗಳು ಪ್ರವಾಸಗಳನ್ನು ಆಯೋಜಿಸಬೇಕು.

## 8. ಸಹಾಯ ಸೂತ್ರಗಳು

### ರಾಜ್ಯ ಸರಕಾರಗಳಿಗಾಗಿ

- ರಾಜ್ಯ ಸರಕಾರ ನಗರಪಾಲಿಕೆಗಳ ಮೂಲಕ ಸದಸ್ಯರಿಗೆ ಪ್ರಾಥಮಿಕ ತರಬೇತಿಯನ್ನು ನೀಡಬೇಕು. ಈ ತರಬೇತಿ ನಗರಪಾಲಿಕೆಗಳ ಸದಸ್ಯರ ಪಾತ್ರ, ಅಧಿಕಾರಗಳು, ಜವಾಬ್ದಾರಿಗಳು, ಕರ್ತವ್ಯಗಳು, ಪರಿಷತ್ತಿನ ಸಭೆಯ ನಿಯಮಾವಳಿಗಳು, ಸರಕಾರದ ಯೋಜನೆಗಳು, ವಾರ್ಡಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವ ವಿಧಾನಗಳು ಹಾಗೂ ಸಂವಿಧಾನದ ಒಳನೆಯ ತಿದ್ದುಪಡಿ, ಜನತಾಂತ್ರಿಕ ವಿಕೇಂದ್ರೀಕರಣ ಮೊದಲಾದ ವಿಷಯಗಳನ್ನು ಒಳಗೊಂಡಿರಬೇಕು.

- ನಗರಪಾಲಿಕೆಗಳ ಸದಸ್ಯರ ಪಾತ್ರವನ್ನು ಸ್ಪಷ್ಟಪಡಿಸುವ ಬಗ್ಗೆ, ಪರಿಷತ್ತಿನ ಸಭೆಯಲ್ಲಿ ಭಾಗವಹಿಸುವಲ್ಲಿ ಅವರಿಗಿರುವ ಸಂದೇಶಗಳು ಹಾಗೂ ಗೊಂದಲಗಳನ್ನು ನಿವಾರಿಸುವ ಬಗ್ಗೆ ನಗರಪಾಲಿಕೆ ಅನುಸರಣಾ ಸಭೆಗಳನ್ನು ನಡೆಸಬೇಕು.

- ಯೋಜನೆಗಳನ್ನು ಹಾಗೂ ನಡಾವಳಿಗಳನ್ನು ನಗರಪಾಲಿಕೆಗಳ ಸದಸ್ಯರಿಗೆ ಪರಿಚಯಿಸಲು ನಗರಪಾಲಿಕೆಗಳ ಸದಸ್ಯರು ಹಾಗೂ ರಾಜ್ಯ ಸರಕಾರದ ವಿವಿಧ ಇಲಾಖೆಗಳ ಅಧಿಕಾರಿಗಳ ಮುಖಾಮುಖಿ ಸಭೆಗಳನ್ನು ರಾಜ್ಯ ಸರಕಾರ ಜಿಲ್ಲಾ ಮಟ್ಟದಲ್ಲಿ ಆಯೋಜಿಸಬೇಕು.

- ನಗರಪಾಲಿಕೆಗಳ ಸದಸ್ಯರು ಹಾಗೂ ಅಧಿಕಾರಿಗಳ ನಡುವ ಪಾತ್ರಗಳ ಸ್ಪಷ್ಟತೆ ಇರುವಂತೆ ರಾಜ್ಯ ಸರಕಾರ ನೋಡಿಕೊಳ್ಳಬೇಕು. ಏಕೆಂದರೆ ಇದು ವಾರ್ಡಗಳ ಕೆಲಸಗಳು ಹಾಗೂ ಪರಿಷತ್ತಿನ ಸಭೆಗಳ ಮೇಲೆ ಪರಿಣಾಮ ಬೀರುತ್ತದೆ.

### ಪರಿಷತ್ತಿನ ಸಭೆಗಳಲ್ಲಿ:

- ವಾರ್ಡಗಳ ಹಾಗೂ ನಗರದ ಅಭಿವೃದ್ಧಿಯ ಬಗ್ಗೆ ಗುಣಾತ್ಮಕ ಚರ್ಚೆ ಸಾಧ್ಯವಾಗುವಂತೆ ಪರಿಷತ್ತಿನ ಸಭೆಗಳನ್ನು ನಡೆಸುವಲ್ಲಿ ಕಟ್ಟುನಿಟ್ಟಾದ ನಡಾವಳಿ ಇರುವಂತೆ ರಾಜ್ಯ ಸರಕಾರ ನೋಡಿಕೊಳ್ಳಬೇಕು.

- ನಗರಸಭೆಗಳ ಸದಸ್ಯರ ನಡತೆ ಹಾಗೂ ಚರ್ಚೆಗಳ ಬಗ್ಗೆ ರಾಜ್ಯ ಸರಕಾರ ಒಂದು ನಡತೆಯ ನಿಯಮಾವಳಿಯನ್ನು ರಚಿಸಬೇಕು.

- ಶಿಸ್ತು ಇರುವ ಹಾಗೆ, ಸಭೆಗಳಲ್ಲಿ ಮಾತನಾಡಲು ಹಾಗೂ ಭಾಗವಹಿಸಲು ಪ್ರತಿಯೊಬ್ಬ ಸದಸ್ಯರಿಗೆ ಹಕ್ಕು ಇರುವ ಹಾಗೆ ಹಾಗೂ ಸಭೆಗಳಲ್ಲಿ ಅರ್ಥಪೂರ್ಣ ಚರ್ಚೆಗಳು ನಡೆಯುವ ಹಾಗೆ ರಾಜ್ಯ ಸರಕಾರ ನೋಡಿಕೊಳ್ಳಬೇಕು.

- ಪ್ರಶ್ನೆಗಳಿಗೆ ಉತ್ತರ ನೀಡಲು ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭೆಗಳಲ್ಲಿ ಹಾಜರಿರುವಂತೆ ರಾಜ್ಯ ಸರಕಾರ ನೋಡಿಕೊಳ್ಳಬೇಕು.

- ರಾಜ್ಯದ ರಾಜಧಾನಿಯಲ್ಲಿ ರೂಪಿಸಲಾದ ನೀತಿಗಳ ಬಗ್ಗೆ ನಗರಪಾಲಿಕೆಗಳ ಸದಸ್ಯರ ಅಭಿಪ್ರಾಯಗಳನ್ನು ರಾಜ್ಯ ಸರಕಾರ ಪಡೆಯಬೇಕು.

### ವಾರ್ಡ ಕೆಲಸಗಳ ನಿರ್ವಹಣೆ:

- ವಾರ್ಡ ಹಾಗೂ ನಗರಗಳ ಅಭಿವೃದ್ಧಿ ಕೆಲಸಗಳ ಸಮರ್ಪಕ ನಿರ್ವಹಣೆ ಸಾಧ್ಯವಾಗುವಂತೆ ನಗರಪಾಲಿಕೆಗಳ ಸದಸ್ಯರು ಹಾಗೂ ಅಧಿಕಾರಿಗಳ ನಡುವೆ ಸರಿಯಾದ ಸಹಕಾರ ಸಾಧ್ಯವಾಗುವಂತೆ ರಾಜ್ಯ ಸರಕಾರ ನೋಡಿಕೊಳ್ಳಬೇಕು.

- ವಾರ್ಡ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ, ನಾಗರಿಕರೊಂದಿಗೆ ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ವಿಚಾರ ವಿನಿಮಯ ಮಾಡುವಲ್ಲಿ,

ವರ್ಷ ವರ್ಷವೂ ಜಾರಿಗೊಳ್ಳುವಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಲ್ಲಿ, ಕ್ರಿಯಾ ಯೋಜನೆಯ ಅಂಶಗಳನ್ನು ಪರಿಷತ್ತಿನ ಸಭೆಗಳಿಗೆ ಸಂಯೋಜಿಸುವಲ್ಲಿ ಹಾಗೂ ಕ್ರಿಯಾ ಯೋಜನೆಯನ್ನು ಜಾರಿಗೊಳಿಸುವಲ್ಲಿ ನಗರಪಾಲಿಕೆಗಳ ಸದಸ್ಯರಿಗೆ ತರಬೇತಿ ನೀಡಬೇಕು.

- ಸಭೆಗಳಿಗೆ ಹಾಜರಾಗಲು ಹಾಗೂ ಬೆಳಗು ಮುಂಜಾನೆ ಅಥವಾ ಸಂಜೆ, ವಾರ್ಡಗಳ ಕೆಲಸಗಳನ್ನು ಮಾಡಲು ಅಥವಾ ಕಾಮಗಾರಿ ನಡೆದ ಸ್ಥಳಗಳಿಗೆ ಭೇಟಿ ನೀಡಲು ರಾಜ್ಯ ಸರಕಾರ ಮಹಿಳಾ ಸದಸ್ಯರಿಗೆ ಅನುಕೂಲಗಳನ್ನು ಮಾಡಿಕೊಡಬೇಕು.

## ನಗರಪಾಲಿಕೆಗಳ ಮಹಿಳಾ ಹಾಗೂ ಪುರುಷ ಸದಸ್ಯರ ಬಗ್ಗೆ ನೀತಿ:

- ಎಲ್ಲಾ ಸ್ತರಗಳಲ್ಲಿ ಚುನಾಯಿತ ಪ್ರತಿನಿಧಿಗಳಾಗುವ ಪಕ್ಷದ ಸದಸ್ಯರಿಗೆ ಅವರ ಪಾತ್ರವನ್ನು ವಿವರಿಸುವ ಒಂದು ದಾಖಲೆ ಸರಕಾರದ ಹತ್ತಿರ ಇರುವುದು ಮುಖ್ಯ. ಪಕ್ಷದ ಸದಸ್ಯರು ಚುನಾಯಿತ ಪ್ರತಿನಿಧಿಯ ಪಾತ್ರವನ್ನು ನಿರ್ವಹಿಸುವಲ್ಲಿ ಅವರಿಗೆ ಸ್ಪಷ್ಟತೆಯನ್ನು ಈ ದಾಖಲೆ ನೀಡಬೇಕು.
- ನಗರಪಾಲಿಕೆಗಳ ಚುನಾಯಿತ ಸದಸ್ಯರು ಯಾವ ದಿಕ್ಕಿನಲ್ಲಿ ಮುಂದುವರೆಯಬೇಕು ಎಂಬ ಬಗ್ಗೆ ಹಾಗೂ ಮಹಿಳಾ ಸದಸ್ಯರ ದಕ್ಷತೆಯನ್ನು ಹೆಚ್ಚಿಸಲು ಮಹಿಳೆಯರಿಗೆ ಒದಗಿಸಬೇಕಿರುವ ಕ್ರಮಗಳನ್ನು ಈ ನೀತಿ ದಾಖಲೆಯಲ್ಲಿ ಸ್ಪಷ್ಟವಾಗಿ ಹೇಳಿರಬೇಕು.

## ದಕ್ಷತೆಯನ್ನು ಹೆಚ್ಚಿಸಲು ಮಾರ್ಗೋಪಾಯಗಳನ್ನು ಒದಗಿಸುವುದು:

- ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಹಾಗೂ ನೀತಿಗಳ ಬಗ್ಗೆ ಚರ್ಚೆ ಮಾಡುವ ಮೂಲಕ ನಗರಪಾಲಿಕೆಗಳ ಸದಸ್ಯರಿಗೆ ಕಲಿಕೆಯ ಸಾಧನವಾಗಿ ಸರಕಾರ ಮಾಸಿಕ ಚರ್ಚೆಗಳನ್ನು, ತ್ರೈಮಾಸಿಕ ಕಾರ್ಯಾಗಾರಗಳನ್ನು ಹಾಗೂ ವಾರ್ಷಿಕ ಸಮ್ಮೇಳನಗಳನ್ನು ಆಯೋಜಿಸಬೇಕು. ಹಾಗೂ ಇದನ್ನು ನಗರಪಾಲಿಕೆಯ ನಡಾವಳಿಯ ಹಾಗೂ ಸೇವೆಯ ಕಡ್ಡಾಯ ಅಂಶವನ್ನಾಗಿ ಮಾಡಬೇಕು.
- ನಗರಪಾಲಿಕೆಗಳ ಸದಸ್ಯರು ಬೇರೆ ಪಟ್ಟಣಗಳಿಗೆ ಹಾಗೂ ನಗರಗಳಿಗೆ ಭೇಟಿ ನೀಡಿ ಅನುಭವಗಳನ್ನು ಹಂಚಿಕೊಳ್ಳುವುದು ಸಾಧ್ಯವಾಗುವಂತೆ ಸರಕಾರ ಪ್ರವಾಸಗಳನ್ನು ಪ್ರೋತ್ಸಾಹಿಸಬೇಕು.
- ಜಿಲ್ಲಾ ಮಟ್ಟದಲ್ಲಿ ನಗರಪಾಲಿಕೆಗಳ ಸದಸ್ಯರಿಗೆ ತರಬೇತಿ ನೀಡಲು ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ, ಜಿಲ್ಲಾ ತರಬೇತಿ ಸಂಸ್ಥೆಗಳ ಸೌಲಭ್ಯಗಳನ್ನು ಸರಕಾರ ಬಳಸಿಕೊಳ್ಳಬೇಕು.
- ಸರಕಾರ ವಾರ್ಡ ಸ್ತರದಲ್ಲಿ ಪ್ರತಿ ತಿಂಗಳು ಸಭೆ ನಡೆಸಲು ಅನುಕೂಲ ಮಾಡಿಕೊಡಬೇಕು. ಇದನ್ನು ಸಂವಿಧಾನದ 74ನೆಯ ತಿದ್ದುಪಡಿಯೊಂದಿಗೆ ಜೋಡಿಸಬಹುದು.
- ಸಂವಿಧಾನದ 74ನೆಯ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು ಸರಕಾರ ನಗರಪಾಲಿಕೆಗಳಿಗೆ ಸ್ವಾಯತ್ತತೆಯನ್ನು ನೀಡುವ ದೃಷ್ಟಿಯಿಂದ ರಾಜ್ಯ ವ್ಯವಸ್ಥೆಯ ಅಂಗಗಳ ಪಾತ್ರಗಳನ್ನು ಹಾಗೂ ಅವುಗಳ ಪರಸ್ಪರ ಸಂಬಂಧಗಳನ್ನು ಸ್ಪಷ್ಟವಾಗಿ ನಿರ್ವಚಿಸಬೇಕು.